A.2255

ಕನ್ನಡ ಸಾಹಿತ್ಯ ಪರಿಷತ್ತು, ಸರಸ್ವತಿ ಭಂಡಾರ,
ಬೆಂಗಳೂರು-೧೮.

ಏಕನಾಥ ಸಾಧುಗಳ ಚರಿತ್ರೆಯು.

ಗುರುಬಸಪ್ಪ ಪಕ್ಕೀರಪ್ಪ. ಹಳಕಟ್ಟಿ.

Δ, 2wAKA
M94
2255

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY

ಕನ್ನಡ ಸಾಹಿತ್ಯ ಪರಿಷತ್ತು, ಸರಸ್ವತಿ ಭಂಡಾರ,
ಬೆಂಗಳೂರು-೧೮.

# LIFE OF EKANATH

in Kanarese

BY

GURUBASAPPA F. HALKATTI.

First Edition 1000 Copies.

# ಏಕನಾಥ ಸಾಧುಗಳ

## ಚರಿತ್ರೆಯು.

ಗುರುಬಸಪ್ಪ ಫಕ್ಕೀರಪ್ಪ ಹಳಕಟ್ಟಿ
ಇವರಿಂದ ಬರೆಯಲ್ಪಟ್ಟಿತು.

ಮೊದಲನೆಯ ಆವೃತ್ತಿ ೧,೦೦೦ ಪ್ರತಿಗಳು.

*Registered under Act XXV of 1867.*

DHARWAR

1894

*(All rights reserved.)*

Digitized by ROJA MUTHIAH RESEARCH LIBRARY

A 2255.

Δ.2ಎAKA M94

ಧಾರವಾಡ

ಜ್ಞಾನವರ್ಧಕ ಛಾಪಖಾನೆಯಲ್ಲಿ ಛಾಪಿಸಲ್ಪಟ್ಟಿತು.

೧೮೯೪

# ಪ್ರಸ್ತಾವನೆ.

ದಕ್ಷಿಣಮಹಾರಾಷ್ಟ್ರ ರೇಲ್ವೆಯ ಕಂಪನಿಯ ನೌಕರರಾಗಿದ್ದ ಬಾಬೂ ದೀನಾನಾಥ ಗಾಂಗೋಳಿ ಎಂಬ ಸದ್ಗೃಹಸ್ಥರು ಕುಸು ದಿವಸಗಳ ಹಿಂದೆ ಪೆನ್‍ಶನ್ ಪಡೆದು ಬಂಗಾಲ ಪ್ರಾಂತಕ್ಕೆ ತೆರಳಿದರು. ಅವರು ಧಾರವಾಡ ಪಟ್ಟಣದಲ್ಲಿ ಆಗುತ್ತಿರುವ ಮಿತ್ರಸಮಾಜದ ವಾರ್ಷಿಕ ವ್ಯಾಖ್ಯಾನಗಳ ಕಾಲಕ್ಕೆ ಹಿಂದುಸ್ಥಾನದ ಎಷ್ಟೋ ಸಾಧುಪುರುಷರ ವಿಷಯವಾಗಿ ವ್ಯಾಖ್ಯಾನಗಳನ್ನು ಕೊಟ್ಟರು. ಅವುಗಳಲ್ಲಿ ಏಕನಾಥನ ಚರಿತ್ರೆಯು ಒಂದಾಗಿದೆ. ಈ ಚರಿತ್ರೆಯು ಮನೋಹರವಾಗಿಯೂ ಬೋಧಪರವಾಗಿಯೂ ಇರುವದರಿಂದ ಇದನ್ನು ಕನ್ನಡ ಭಾಷೆಯಲ್ಲಿ ಬರೆದರೆ ವಾಚಕರಿಗೆ ತಕ್ಕಮಟ್ಟಿಗೆ ಪ್ರಯೋಜನವಾಗುವದೆಂದು ಎಣಿಸಿ ಅವರ ವ್ಯಾಖ್ಯಾನದ ಆಧಾರದಿಂದ ಇದನ್ನು ಬರೆದು ಕನ್ನಡಿಗರ ಮುಂದಿಟ್ಟಿದ್ದೇನೆ. ಇದರ ಗುಣದೋಷಗಳನ್ನು ಪರೀಕ್ಷಿಸುವ ಕೆಲಸವು ವಾಚಕರ ಕಡೆಗುಂಟು.

ದೊಡ್ಡ ಮನಸ್ಸಿನಿಂದ ಮಿ. ಗಾಂಗೋಳಿ ಇವರು ಈ ಸತ್ಪುರುಷನ ಚರಿತ್ರೆಯು ಕನ್ನಡಿಗರಿಗೆ ಸಿಗುವಂತೆ ಮಾಡಿದ್ದಕ್ಕೆ ಅವರ ಉಪಕಾರವನ್ನು ಪುನಃಪೂರ್ವಕವಾಗಿ ನೆನಿಸುತ್ತೇನೆ. ವಾಚಕರು ಇ

Digitized by ROJA MUTHIAH RESEARCH LIBRARY

ದೆರಲ್ಲಿ ಕಂಡು ಬಂದ ದೋಷಗಳನ್ನು ನನಗೆ ದಯಮಾಡಿ ಅರುಹಿದರೆ, ೨ನೆಯ ಆವೃತ್ತಿಯ ಕಾಲಕ್ಕೆ ಅವುಗಳನ್ನು ತಿದ್ದಿ ಅವರಿಗೆ ಕೃತಜ್ಞನಾಗುವೆನು.

ಧಾರವಾಡ
ತಾ. ೨೩।೯।೧೪ } ಗು. ಫ. ಹಳಕಟ್ಟಿ.

—০*০—

# ಅನುಕ್ರಮಣಿಕೆ.


| | ವಿಷಯ | ಪುಟಗಳು |
|---|---|---|
| ೧ | ಏಕನಾಥನ ಬಾಲ್ಯ..... ..... | ೧–೧೧ |
| ೨ | ಜನಾರ್ದನಪಂತರು........ | ೧೨–೧೪ |
| ೩ | ಏಕನಾಥನ ಅಭ್ಯಾಸ..... ..... | ೧೪–೨೩ |
| ೪ | ಅವನ ಅಜ್ಜವ್ವಂದಿರ ದುಃಖ..... | ೨೩–೨೬ |
| ೫ | ,, ತೀರ್ಥಾಟನ. ..... .... | ೨೭–೩೪ |
| ೬ | ,, ಗೃಹಸ್ಥಾಶ್ರಮ. ..... | ೩೫–೩೭ |
| ೭ | ,, ಸಾಧುತ್ವ. ..... .... | ೩೮–೪೨ |
| ೮ | ,, ಅದ್ಭುತಕೃತ್ಯಗಳು..... ..... | ೪೩–೪೯ |
| ೯ | ,, ಗ್ರಂಥಗಳು. ..... ..... | ೪೯–೫೩ |
| ೧೦ | ,, ದೇಹ ಪರಿತ್ಯಾಗ. ..... .... | ೫೪–೫೪ |
| ೧೧ | ,, ಉಪಸಂಹಾರ. ..... .... | ೫೫–೬೦ |


—০*০—

Digitized by ROJA MUTHIAH RESEARCH LIBRARY

# ಏಕನಾಥನ ಚರಿತ್ರೆಯು.

ನಮ್ಮ ಧರ್ಮಶ್ರದ್ಧೆ, ಪರೋಪಕಾರಬುದ್ಧಿ, ನೀತಿ ಮುಂತಾದ ಗುಣಗಳು ಪೂರ್ವಕಾಲದಲ್ಲಿ ಊರ್ಜಿತಸ್ಥಿತಿಗೆ ಬಂದಿದ್ದವು; ಆದರೆ ಅವು ಹಲವು ಕಾರಣಗಳಿಂದ ಇತ್ತಿತ್ತಲಾಗಿ ಕ್ಷೀಣವಾಗುತ್ತ ನಡೆದಿರುತ್ತವೆ. ಅವು ಇಷ್ಟು ಕ್ಷೀಣ ಸ್ಥಿತಿಗೆ ಬಂದಿದ್ದರೂ ಅನ್ಯ ರಾಷ್ಟ್ರದವರ ವಿಷಯವಾಗಿ ವಿಚಾರ ಮಾಡಿದರೆ, ಈ ಗುಣಗಳು ಅವರಲ್ಲಿರುವದಕ್ಕಿಂತ ನಮ್ಮಲ್ಲಿ ಇನ್ನೂ ಹೆಚ್ಚು ಪ್ರಮಾಣದಿಂದಿರುತ್ತವೆಂದು ಸಹಜವಾಗಿ ತಿಳಿಯುವದು. ಅವು ನಮ್ಮ ಮನಸಿನಲ್ಲಿ ಇಷ್ಟು ಸ್ಥಿರವಾಗಿ ನೆಲೆಗೊಳ್ಳಲಿಕ್ಕೆ ಹಲವು ಕಾರಣಗಳುಂಟು. ಧರ್ಮನಿಷ್ಠೆಯಿಂದ ಸ್ವತಃ ವರ್ತಿಸಿದ್ದಲ್ಲದೆ ಜನರಲ್ಲಿ ಧರ್ಮಶ್ರದ್ಧೆ, ಪರೋಪಕಾರಬುದ್ಧಿ, ಬಂಧುಪ್ರೀತಿ, ನೀತಿ ಮುಂತಾದ ಮೇಲಾದ ಗುಣಗಳನ್ನು ಹೆಚ್ಚಿಸಿ, ಸ್ವದೇಶದ ಹಿತವನ್ನು ಚಿಂತಿಸುವದೇ ತಮ್ಮ ಜನ್ಮದ ಸಾರ್ಥಕ್ಯವೆಂದು ಎಣಿಸುವವರೂ ಕೈಕೊಂಡ ಕೆಲಸವನ್ನು ದೃಢ ಮನಸಿನಿಂದ ಕೊನೆಗಾಣಿಸುವವರೂ ಆದ ಎಷ್ಟೋ ಸಾಧು ಪುರುಷರು ಕಾಲಕಾಲಕ್ಕೆ ಮಾಡಿದ ದೀರ್ಘ ಪ್ರಯತ್ನಗಳು ಆ ಹಲವು ಕಾರಣಗಳಲ್ಲಿ ಒಂದಾಗಿವೆ. ಈ ಮಾದರಿಯ ಪುರುಷರು ದೇವರ ಕೃಪೆ

Digitized by ROJA MUTHIAH RESEARCH LIBRARY

ಯಿಂದ ಒಮ್ಮೊಮ್ಮೆ ಭೂಮಿಯಲ್ಲಿ ಹುಟ್ಟುವರು. ಇಂಥವರ ಹೊರತು ಯಾವ ಧರ್ಮವಾದರೂ ಯಾವ ದೇಶವಾದರೂ ಬಹುಶಃ ಊರ್ಜಿತಸ್ಥಿತಿಗೆ ಬರುವದಿಲ್ಲ. ಇಂಥ ಪುರುಷರಲ್ಲಿ ಏಕನಾಥನು ಒಬ್ಬನಾಗಿರುತ್ತಾನೆ. ಅವನ ಚರಿತ್ರೆಯು ಮನೋಹರವಾಗಿಯೂ ಬೋಧಪರವಾಗಿಯೂ ಇರುತ್ತದೆ. ಅದನ್ನು ಓದುವವರಿಗೆ ಸಂತೋಷವಾಗುವದಲ್ಲದೆ, ಗುರುಹಿರಿಯರಲ್ಲಿ ಭಕ್ತಿಯೂ ದೇವರಲ್ಲಿ ನಂಬಿಗೆಯೂ ಧರ್ಮದಲ್ಲಿ ನಿಷ್ಠೆಯೂ ಪರೋಪಕಾರ ಬುದ್ಧಿಯೂ ಜಾಗ್ರತವಾಗುವವೆಂದು ನೆನಿಸಿ, ನಾವು ಆ ಸತ್ಪುರುಷನ ಚರಿತ್ರೆಯನ್ನು ಬರೆಯಹತ್ತಿದ್ದೇವೆ.

ಏಕನಾಥನು ಸನ್ ೧೫೪೮ನೆಯ ವರ್ಷ ಗೋದಾವರೀತೀರದಲ್ಲಿರುವ ಪೈಠಣ* ಎಂಬ ಪಟ್ಟಣದಲ್ಲಿ ಹುಟ್ಟಿದನು. ಅವನ ತಂದೆಯ ಹೆಸರು ಸೂರ್ಯನಾರಾಯಣನು. ಅವನು ಬಡವನೂ ಸದ್ಗುಣಿಯೂ ಆಗಿದ್ದನು. ಏಕನಾಥನು ತೀರ ಚಿಕ್ಕವನಿರುವಾಗ ಅವನ ತಾಯಿತಂದೆಗಳು ತೀರಿಕೊಳ್ಳಲು, ಪರದೇಶಿಯಾದ ಏಕನಾಥನನ್ನು ಅವನ ಅಜ್ಜನಾದ ಚಕ್ರಪಾಣಿಯೂ ಅವನ ಹೆಂಡತಿಯೂ ಜೋಪಾನಮಾಡಿದರು.

---

* ಇದು ಶಾಲಿವಾಹನನ ರಾಜಧಾನಿಯು.



ಏಕನಾಥನು ಶಾಂತ ಸ್ವಭಾವದವನಾಗಿದ್ದನು. ಅವನ ಮೇಲಾದ ಈ ಸ್ವಭಾವವು ಚಿಕ್ಕತನದಲ್ಲಿಯೇ ಕಂಡುಬಂತು. ಅವನು ತುಸು ದೊಡ್ಡವನಾದ ಮೇಲೆ ಏಕಾಂತ ಸ್ಥಳಗಳಿಗೆ ಹೋಗಿ, ಅಲ್ಲಿ ವಿಚಾರ ಮಾಡುತ್ತ ಕೂಡ್ರುವನು. ಅವನು ತನ್ನ ಓರಿಗೆಯ ಗೆಳೆಯರೊಂದಿಗೆ ಆಟನೋಟಗಳಲ್ಲಿ ಹೊತ್ತುಗಳೆಯದೆ, ತಾನೊಬ್ಬನೇ ಒಂದು ವಿಶೇಷ ಪ್ರಕಾರದ ಆಟವಾಡಿ ವಿನೋದಬಡುವನು. ಅದು ಹೇಗೆಂದರೆ— ಅವನು ಆಗಾಗ್ಗೆ ಗೋದಾವರಿಯ ನದಿಗೆ ಹೋಗಿ, ಅದರ ದಂಡೆಯ ಮೇಲಿನ ಕಲ್ಲುಗಳನ್ನು ಆರಿಸಿ ಒಂದು ಸ್ಥಳದಲ್ಲಿಟ್ಟು, ಅವನ್ನು ಸ್ವಚ್ಛವಾಗಿ ತೊಳೆದು, ಸುತ್ತಲಿನ ಗಿಡಗಳಿಂದ ಹೂವುಗಳನ್ನು ಎತ್ತಿ ತಂದು, ಆ ಕಲ್ಲುಗಳಿಗೆ ಏರಿಸಿ ಪೂಜಿಸುವನು. ಕೈಗಳನ್ನು ಜೋಡಿಸಿ ಯಾರಿಗೂ ಕೇಳಿಸದಂತೆ ಪ್ರಾರ್ಥನೆ ಮಾಡುವನು. ಹರಿದಾಸರು ಕಥಾಕೀರ್ತನೆಗಳನ್ನು ಮಾಡುವಾಗ ಹೇಳುವ ಬೋಧಪರ ಶ್ಲೋಕಗಳನ್ನು ಒಮ್ಮೊಮ್ಮೆ ತನಗೆ ಬಂದಂತೆ ನುಡಿಯುವನು.

ಚಕ್ರಪಾಣಿಯು ಮೊಮ್ಮಗನ ಈ ನಡತೆಯನ್ನು ನೋಡಿ ತುಂಬಾ ಸಂತೋಷಬಟ್ಟು, ಅವನಿಗೆ ಓದಲಿಕ್ಕೂ ಬರೆಯಲಿಕ್ಕೂ ಕಲಿಸಹತ್ತಿದನು. ಏಕನಾಥನು ಚುರುಕು ಬುದ್ಧಿಯುಳ್ಳವನಾಗಿದ್ದನು. ಅವನ ಸ್ಮರ

Digitized by ROJA MUTHIAH RESEARCH LIBRARY

ಣಶಕ್ತಿಯಾದರೂ ಬಣ್ಣಿಸತಕ್ಕಂಥಾದಿತ್ತು. ಆದದ್ದರಿಂದ ಅವನು ತುಸು ದಿವಸಗಳಲ್ಲಿಯೇ ತನ್ನ ಯೋಗ್ಯತೆಯ ಮೀರಿ ಅಭ್ಯಾಸ ಮಾಡಿದನು. ಚಕ್ರಪಾಣಿಯು ಇದಕ್ಕೆ ಹಿರಿಹಿರಿ ಹಿಗ್ಗಿ, ಅವನಿಗೆ ವೇದಾಧ್ಯಯನ ಮಾಡಿಸಿದರೆ ಒಳಿತಾಗುವದೆಂದು ಆಲೋಚಿಸಿ, ೬ನೆಯ ವರ್ಷಕ್ಕೆ ಅವನ ಉಪನಯನ ಮಾಡಿ, ಅವನನ್ನು ಒಬ್ಬ ಪಂಡಿತನ ವಶಕ್ಕೆ ಕೊಟ್ಟನು. ಆ ಪಂಡಿತನು ಏಕನಾಥನ ಜಾಣ್ಮೆಗೆ ಮೆಚ್ಚಿ ಅವನಿಗೆ ವೇದಾಧ್ಯಯನವನ್ನು ಮನಃಪೂರ್ವಕವಾಗಿ ಮಾಡಿಸಹತ್ತಿದನು. ಏಕನಾಥನು ವೇದ ಪಠಣದಲ್ಲಿಯೇ ತನ್ನ ಹೊತ್ತನ್ನೆಲ್ಲ ಕಳೆಯದೆ, ಪುರಾಣಗಳನ್ನು ಓದಲಿಕ್ಕೂ ಕಥಾಕೀರ್ತನೆಗಳಿಗೆ ಹೋಗಲಿಕ್ಕೂ ಆರಂಭಿಸಿದನು. ಇದರಿಂದ ಧರ್ಮಗ್ರಂಥಗಳಲ್ಲಿ ವಿವರಿಸಲ್ಪಟ್ಟ ಎಷ್ಟೋ ಮಹತ್ವದ ಸಂಗತಿಗಳು ಅವನಿಗೆ ತಿಳಿದವು. ಇದಲ್ಲದೆ ಸತ್ಪುರುಷರ ಚರಿತ್ರಗಳನ್ನು ಲಕ್ಷಪೂರ್ವಕವಾಗಿ ಓದಿ, ಅವರಲ್ಲಿದ್ದ ಮೇಲಾದ ಗುಣಗಳನ್ನು ತಿಳಕೊಂಡು, ಅವರಂತೆ ತಾನೂ ನಡೆಯಹತ್ತಿದನು. ಈ ಸದ್ವರ್ತನದಿಂದ ಬ್ರಹ್ಮಜ್ಞಾನವನ್ನು ಪಡೆಯಬೇಕೆಂಬ ಉತ್ಕಟ ಇಚ್ಛೆಯು ಅವನಲ್ಲಿ ಹುಟ್ಟಿತು. ಅದನ್ನು ತೃಪ್ತಿಬಡಿಸುವದಕ್ಕಾಗಿ ಅವನು ಪೈಠಣದೊಳಗಿನ ಧರ್ಮೋಪದೇಶಕರ ಬಳಿಗೂ ಸಾಧುಗಳ ಬಳಿಗೂ ಹೋಗಲಾ



ರಂಭಿಸಿದನು. ಅವನು ಮಾಡಿದ ಎಷ್ಟೋ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕೊಟ್ಟು ಅವನನ್ನು ಒಡಂಬಡಿಸುವದು ಅವರಿಂದಾಗಲಿಲ್ಲ. ಏಕನಾಥನು ಇಲ್ಲದ್ದೊಂದು ಪ್ರಶ್ನೆ ಮಾಡಿ ಅವರಿಗೆ ತೊಂದರೆ ಕೊಡ ಹೋದವನಲ್ಲ; ಆದರೆ ಅವರಿಂದ ಪರಮಾರ್ಥಜ್ಞಾನವನ್ನು ಪಡೆಯಲಿಕ್ಕೆ ಹೋದವನು. ಆದುದರಿಂದ ಅವನು ಶಾಂತತೆಯಿಂದಲೂ ನಮ್ರತೆಯಿಂದಲೂ ಪ್ರಶ್ನೆಗಳನ್ನು ಮಾಡುವನು. ಅವರು ಹೇಳಿದ್ದನ್ನು ಲಕ್ಷಗೊಟ್ಟು ಕೇಳುವನು. ಅವನ ಈ ಮೇಲಾದ ನಡತೆಯನ್ನು ನೋಡಿ, ಅವರು ಕೈಲಾದಮಟ್ಟಿಗೆ ಅವನ ಸಂಶಯಗಳನ್ನು ಪರಿಹಾರ ಮಾಡುವರು ಮತ್ತು ಅವನನ್ನು ತುಂಬಾ ಪ್ರೀತಿಸುವರು.

ಏಕನಾಥನು ತನ್ನ ಅಜ್ಜಮ್ಮಂದಿರ ಅಪ್ಪಣೆಗಳನ್ನು ಪಾಲಿಸುವನು. ಅವರನ್ನು ತನ್ನ ಜೀವಕ್ಕಿಂತ ಹೆಚ್ಚೆಂದೆಣಿಸಿ ಜೋಪಾನ ಮಾಡುವನು. ಅವರಿಗೆ ಬೇನೆಬೇಸರಿಕೆಗಳು ಬಂದರೆ ಅವರ ಬಳಿಯಲ್ಲಿಯೇ ಇದ್ದು ಅವರಿಗೆ ಬೇಕಾದ ಪದಾರ್ಥಗಳನ್ನು ಕೊಡುವನು. ಗುರುಹಿರಿಯರಿಗೆ ಯೋಗ್ಯವಾದ ಸನ್ಮಾನ ಮಾಡುವನು. ತನ್ನ ಓರಿಗೆಯವರನ್ನೂ ತನಗಿಂತ ಚಿಕ್ಕವರನ್ನೂ ಪ್ರೀತಿಸುವನು. ಅವನು ಬಲು ತಾಳ್ಮೆಯುಳ್ಳವನಾಗಿದ್ದನು. ನೆರೆಹೊರೆಯ ಹುಡು

Digitized by ROJA MUTHIAH RESEARCH LIBRARY

ಗರು ಬೈದರೂ ಎದರುತ್ತರ ಕೊಡದೆ ಸುಮ್ಮನೆ ತಡಕೊಳ್ಳುವನು.

ಪೈಠಣದೊಳಗಿನ ಪಂಡಿತರಿಂದ ಅವನ ಶಂಕಾಸಮಾಧಾನವಾಗದಿರಲು ಅವನ ಚಿತ್ತವು ಚಂಚಲವಾಯಿತು. ತನ್ನ ಸಂಶಯಗಳನ್ನು ಪರಿಹಾರ ಮಾಡಿ ಬ್ರಹ್ಮಜ್ಞಾನವನ್ನೀಯುವ ಗುರುವು ಹೇಗೆ ಸಿಗುವನೆಂಬ ಹಂಬಲದಿಂದ, ಅವನು ದೇವಾಲಯಗಳಿಗೂ ಪವಿತ್ರಸ್ಥಳಗಳಿಗೂ ಪುನಃಪುನಃ ಹೋಗಿ, ಅಲ್ಲಿ ಧ್ಯಾನಸ್ಥನಾಗಿ ಕೂಡ್ರುವನು. ಒಂದುಸಾರೆ ಅವನು ದೇವರ ಧ್ಯಾನ ಮಾಡುತ್ತ ಏಕಾಗ್ರಚಿತ್ತದಿಂದ ಒಂದು ಶಿವಾಲಯದಲ್ಲಿ ಕೂತಿರಲು ಒಮ್ಮಿಂದೊಮ್ಮೆ ಗಂಭೀರವಾದ ಶಬ್ದವು ಹುಟ್ಟಿತು. ಅದೇನೆಂದರೆ:—ದೇವಗಿರಿಯಲ್ಲಿ ಜನಾರ್ದನಪಂತನೆಂಬ ಸತ್ಪುರುಷನಿರುವನು. ಅವನಿಂದ ಉಪದೇಶ ಹೊಂದು, ಅಂದರೆ ನಿನ್ನ ಕೋರಿಕೆಯು ಈಡೇರುವದು. ಈ ಶಬ್ದವನ್ನು ಕೇಳಿ ಏಕನಾಥನು ಆಶ್ಚರ್ಯಬಟ್ಟನು. ಆದು ಈ ಏಕಾಂತಸ್ಥಳದಲ್ಲಿ ಹೇಗೆ ಹುಟ್ಟಿರಬಹುದೆಂಬದು, ಎಷ್ಟು ವಿಚಾರ ಮಾಡಿದರೂ ಅವನಿಗೆ ತಿಳಿಯಲಿಲ್ಲ. ಕಟ್ಟಕಡೆಗೆ, " ಸರ್ವಶಕ್ತನಾದ ದೇವರು ಭಕ್ತರಿಗೆ ತನ್ನಿಚ್ಛೆಯನ್ನು ಒಮ್ಮೊಮ್ಮೆ ಗುಪ್ತರೀತಿಯಿಂದ ಅಂದರೆ ಶಬ್ದಮಾತ್ರದಿಂದ ತಿಳಿಸುವನು " ಎಂಬ ಸಂಗತಿಯನ್ನು ಪುರಾಣಗಳಲ್ಲಿ ಓದಿರುವದು ಅವನಿಗೆ



ನೆನಪಾಯಿತು. ಆಗ ಅವನು ಈ ಶಬ್ದವು ದಿಟವಾಗಿ ದೇವರಿಂದುಂಟಾಗಿದೆಂದು ತಿಳಕೊಂಡು ಸಂತೋಷಬಟ್ಟು, ಅದರಂತೆ ನಡೆಯುವ ನಿಶ್ಚಯ ಮಾಡಿದನು. ಅಷ್ಟರಲ್ಲಿ ಅವನಿಗೆ ಮುಪ್ಪಿನ ಅಜ್ಜಮ್ಮಂದಿರ ನೆನಪಾಯಿತು. ಕೂಡಲೆ ಅವನ ಕಣ್ಣುಗಳಿಂದ ನೀರು ತಮ್ಮಷ್ಟಕ್ಕೆ ತಾವೇ ಹರಿಯಹತ್ತಿದವು. ಆಗ ಅವನು ಅಂದದ್ದು-ಒಂದು ವೇಳೆ ನಾನು ದೇವಗಿರಿಗೆ ಹೋದರೆ ದಿಕ್ಕಿಲ್ಲದ ಅಜ್ಜಮ್ಮಂದಿರನ್ನು ಯಾರು ಜೋಪಾನ ಮಾಡುವರು? ಅವರು ನನ್ನನ್ನು ಬಿಟ್ಟು ಅರಗಳಿಗೆಯಾದರೂ ಇರುವದಿಲ್ಲ. ಇಂಥವರನ್ನು ಬಿಟ್ಟು ನಾನು ಹೇಗೆ ಹೋಗಲಿ? ಈ ಹೊತ್ತಿಗೆ ಅವನು ೮ ವರ್ಷದವನಾಗಿದ್ದನು. ಇಷ್ಟು ಚಿಕ್ಕವನು ಪೈಠಣದಿಂದ ದೇವಗಿರಿಗೆ ಒಬ್ಬನೇ ಹೋಗುವದು ದುಸ್ತರದ ಕೆಲಸವಾಗಿತ್ತು. ಆದರೂ ಆ ಗುಣವಂತನಾದ ಬಾಲಕನು ತನಗೆ ಎಂಥ ಕಷ್ಟಗಳೊದಗಿದರೂ ಚಿಂತೆಯಿಲ್ಲ, ದೇವರ ಆಜ್ಞೆಗೆ ಭಂಗ ತರುವದು ತಕ್ಕದ್ದಲ್ಲೆಂದು ಆಲೋಚಿಸಿ ದೇವಗಿರಿಗೆ ಹೋಗಲನುವಾದನು. ಆದರೆ ದೇವಗಿರಿಯು ಎಲ್ಲಿ ಇರುತ್ತದೆ? ಪೈಠಣದಿಂದ ಎಷ್ಟು ದೂರವದೆ? ಯಾವ ದಿಕ್ಕಿನಲ್ಲಿದೆ? ಮುಂತಾದ ಸಂಗತಿಗಳು ಅವನಿಗೆ ಗೊತ್ತಿದ್ದಿಲ್ಲ. ಆದ್ದರಿಂದ ಅವನು ತನ್ನನ್ನು ಪ್ರೀತಿಸುತ್ತಿದ್ದ ಒಬ್ಬ ಪುರಾಣಿಕನ ಬಳಿಗೆ ಹೋ

Digitized by ROJA MUTHIAH RESEARCH LIBRARY

ಗಿ "ಸ್ವಾಮೀ, ನಾನು ಜನಾರ್ದನಪಂತರನ್ನು ಕಾಣುವದಕ್ಕೆ ದೇವಗಿರಿಗೆ ಹೋಗತಕ್ಕವನಿದ್ದೇನೆ. ತಾವು ದಯಮಾಡಿ, ಆ ಪಟ್ಟಣದ ಮಾರ್ಗ ಯಾವದು? ದಾರಿಯಲ್ಲಿ ಯಾವ ಯಾವ ಊರುಗಳು ಹತ್ತುತ್ತವೆ? ಅದು ಇಲ್ಲಿಂದ ಎಷ್ಟು ದೂರವದೆ? ಈ ಸಂಗತಿಗಳನ್ನು ಎನಗೆ ಅರುಹಬೇಕು" ಎಂದು ಬೇಡಿಕೊಂಡನು. ಆ ಪುರಾಣಿಕನು ಬಹಳ ಸಜ್ಜನನಾಗಿದ್ದನು. ಇವನು ಏಕನಾಥನ ನಿರ್ಧಾರಕ್ಕೆ ಸಂತುಷ್ಟನಾಗಿ ಅವನಿಗೆ ಬೇಕಾದ ಸಂಗತಿಗಳನ್ನು ಹೇಳಿಕೊಟ್ಟು, ನಿನಗೆ ಶುಭವಾಗಲೆಂದು ಹರಸಿ, ಅವನನ್ನು ಕಳಿಸಿದನು. ದೇವಗಿರಿಯು ಪೈಠಣದಿಂದ ೪೦ ಮೈಲಿನ ಮೇಲಿದ್ದರೂ ಆ ಕಾಲಕ್ಕೆ ದಾರಿಯು ಚೆನ್ನಾಗಿರದಿದ್ದರೂ ಆ ದಿಟ್ಟನಾದ ಬಾಲಕನು ಈ ಸುದ್ದಿಯನ್ನು ಮತ್ತಾರಿಗೂ ತಿಳಿಸದೆ ಹಾದಿಯನ್ನು ಹಿಡಿದನು. ಆದರೆ ಅವನು ಎಂದೂ ಹಾದಿಯು ನಡೆದವನಲ್ಲ. ಅದರಲ್ಲಿ ಅವನ ಅಜ್ಜಮ್ಮಂದಿರು ಮೊಮ್ಮಗನಿಗೆ ಬಿಸಿಲು ತಾಗಿದರೆ ಏನಾದೀತೋ, ಗಾಳಿಬಡಿದರೆ ಅವನ ಪ್ರಕೃತಿ ಎಲ್ಲಿ ಕೆಟ್ಟೀತೋ ಎಂದು ಅವನನ್ನು ಹೂವಿನಂತೆ ಜೋಪಾನ ಮಾಡುತ್ತಿದ್ದರು. ಇಂಥ ಎಂಟು ವರ್ಷದ ಸುಕುಮಾರನು ಬೇಸಿಗೆಯ ಪ್ರಖರವಾದ ಬಿಸಲು ಬಡಿಯಲು, ಅದನ್ನು ತಾಳಲಾರದೆ ತೊಟ್ಟಿದ್ದ ಅಂ



ಗಿಯನ್ನು ಕಳೆದು ತಲೆಯ ಮೇಲೆ ಹಾಕಿಕೊಳ್ಳುವನು. ಆಗಾಗ್ಗೆ ಕಾಲುಗಳಲ್ಲಿ ನಟ್ಟಂಥ ಮುಳ್ಳುಗಳನ್ನು ಕಿತ್ತು ಚೆಲ್ಲುವನು. ಆ ಗಾಯಗಳಿಂದ ಸೋರುವ ರಕ್ತವನ್ನು ಮೇಲಿಂದಮೇಲೆ ಒರಿಸಿಕೊಳ್ಳುವನು. ಎದುರಿಗೆ ಯಾರಾದರೂ ಬಂದರೆ ತನ್ನ ಗುರ್ತು ಹಿಡಿಯುವರೋ ಏನೋ ಎಂಬ ಅಂಜಿಕೆಯಿಂದ ಅಡ್ಡ ಮಾರ್ಗ ಹಿಡಿಯುವನು, ಹಸಿದರೆ ಕಾಡು ಹಣ್ಣುಗಳನ್ನೂ ಮರದ ಬೇರುಗಳನ್ನೂ ತಿನ್ನುವನು, ಸಾಯಂಕಾಲಕ್ಕೆ ಊರಲ್ಲಿ ಸೇರದೆ ಅಡವಿಯೊಳಗಿನ ಯಾವದಾದರೊಂದು ಗಿಡದ ಬುಡದಲ್ಲಿ ಮಲಗುವನು. ಭೂಮಿಯ ಮೇಲೆ ಬೆಳೆದ ಹುಲ್ಲೇ ಅವನ ಹಾಸಿಗೆಯು, ಬಳಿಯಲ್ಲಿ ಬಿದ್ದ ಕಲ್ಲೇ ಅವನ ತಲೆಗಿಂಬು. ದೇವಗಿರಿಗೆ ಯಾವಾಗ ಹೋಗುವೆನೋ, ಜನಾರ್ದನಪಂತರನ್ನು ಯಾವಾಗ ಕಾಣುವೆನೋ ಎಂಬ ವಿಚಾರವೇ ಅವನ ಮನಸನ್ನು ತುಂಬಿಕೊಂಡದ್ದರಿಂದ ಮಾರ್ಗದ ಕಷ್ಟಗಳು ಅವನಿಗೆ ಏನೂ ಅನಿಸಲಿಲ್ಲ. ಅವನು ಹೊರಟ ಅಯ್ದನೆಯ ದಿವಸಕ್ಕೆ ದೇವಗಿರಿಗೆ ಹೋಗಿ ಮುಟ್ಟಿದನು.

ಇತ್ತ ಚಕ್ರಪಾಣಿಯೂ ಅವನ ಹೆಂಡತಿಯೂ ಹೊತ್ತು ಮುಳುಗಿದರೂ ಏಕನಾಥನು ಮನೆಗೆ ಬಾರದ್ದನ್ನು ನೋಡಿ, ಅವನು ಬಂದುವೇಳೆ ನೆರೆಯ

ಯಾವದೊಂದು ದೇವಾಲಯಕ್ಕಾಗಲಿ ಸಾಧುಗಳ ದರ್ಶನಕ್ಕಾಗಲಿ ಹೋಗಿರಬಹುದು, ನಾಳೆ ಬೆಳಿಗ್ಗೆ ಬರಬಹುದು ಎಂದು ಎಣಿಸಿದರು. ಮರುದಿವಸ ಹೊತ್ತಾರೆಯಲ್ಲಿಯೇ ಅಡಿಗೆ ಮಾಡಿಟ್ಟು ಏಕನಾಥನ ಹಾದಿಯನ್ನು ನೋಡುತ್ತ ಕುಳಿತರು. ಆದರೆ ಸಾಯಂಕಾಲವಾದರೂ ಅವನು ತಿರುಗಿ ಬರಲಿಲ್ಲ. ಇದೇ ಮೇರೆಗೆ ೨।೩ ದಿವಸಗಳು ದಾಟಿ ಹೋಗಲು, ಆ ಮುದುಕ ಚಕ್ರಪಾಣಿಗೂ ಅವನ ಹೆಂಡತಿಗೂ ಎಷ್ಟು ದುಃಖವಾಗಿದ್ದೀತೆಂಬುದನ್ನು ವಾಚಕರೇ ಊಹಿಸಬಹುದು. ಚಕ್ರಪಾಣಿಯು ನೆರೆಹೊರೆಯ ಜನರನ್ನೂ ಏಕನಾಥನಿಗೆ ಉಪದೇಶ ಮಾಡುತ್ತಿದ್ದ ಪಂಡಿತರನ್ನೂ ವಿಚಾರಿಸಿದನು. ಆದರೆ ಅವರಿಗೆ ಏಕನಾಥನ ಸಮಾಚಾರವು ಗೊತ್ತಿಲ್ಲದ್ದರಿಂದ ಯಾರೂ ಅವನ ಸುದ್ದಿಯನ್ನು ತಿಳಿಸಲಿಲ್ಲ. ಏಕನಾಥನು ಬಹು ಜನರಿಗೆ ಪ್ರಿಯನಾಗಿದ್ದನು. ಆದುದರಿಂದ ಅವನು ಈ ಮೇರೆಗೆ ಒಮ್ಮಿಂದೊಮ್ಮೆ ಮನೆ ಬಿಟ್ಟು ಹೋದದ್ದನ್ನು ಕೇಳಿ, ಕಳವಳಗೊಂಡು ಎಷ್ಟೋ ಜನರು ಸುತ್ತಲಿನ ಗುಡಿಗುಂಡಾರಗಳನ್ನೂ ಹಳ್ಳಕೊಳ್ಳಗಳನ್ನೂ ಗುಹೆಗಳನ್ನೂ ಹುಡುಕಿದರೂ ಏಕನಾಥನು ದೊರೆಯಲಿಲ್ಲ. ಏಕನಾಥನಿಗೆ ದೇವಗಿರಿಯ ಮಾರ್ಗವನ್ನು ಹೇಳಿಕೊಟ್ಟ ಪುರಾಣಿಕನು ಈ ಹೊತ್ತಿಗೆ ಪೈಠಣ



ಬಿಟ್ಟು ಹೋಗಿದ್ದನು.

ಏಕನಾಥನು ದೇವಗಿರಿಗೆ ಹೋಗಿ, ಜನಾರ್ದನಪಂತರ ಮನೆಯನ್ನು ವಿಚಾರಿಸಿದನು. ಅವರು ಆ ಪಟ್ಟಣದಲ್ಲಿ ಹೆಸರಾದ ಗೃಹಸ್ಥರಾಗಿದ್ದುದರಿಂದ ಅವರನ್ನು ಗೊತ್ತು ಹಚ್ಚುವದಕ್ಕೆ ಏಕನಾಥನಿಗೆ ಏನೂ ಆಯಾಸವಾಗಲಿಲ್ಲ. ಇಲ್ಲಿ ಜನಾರ್ದನಪಂತರ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳುವದು ಯುಕ್ತವಾಗಿದೆ. ಜನಾರ್ದನಪಂತರು ಒಬ್ಬ ದೇಶಸ್ಥ ಬ್ರಾಹ್ಮಣರು. ಅವರು ಚಾಳೀಸಗಾವ* ಎಂಬ ಊರಿನ ದೇಶಪಾಂಡೆಯರು. ಅವರು ದೊಡ್ಡ ಮನಸಿನವರೂ ವ್ಯವಹಾರಜ್ಞರೂ ರಾಜ್ಯಕಾರ್ಯಧುರಂಧರರೂ ಕತ್ತಿಯ ಕೈಲೆ ಶೂರರೂ ಸತ್ಪುರುಷರೂ ಆಗಿದ್ದರು. ಈ ಹೊತ್ತಿಗೆ ದೇವಗಿರಿಯನ್ನು++ ಮಲಿಕ

---

* ಈ ಊರು ಗ್ರೇಟ್ ಇಂಡಿಯನ್ ಪೆನಿನ್ಸುಲಾ ರೇಲ್ವೆಯ ಒಂದು ಸ್ಟೇಶನ್ನಿನ ಸ್ಥಳವೂ ಧುಳೆ ಜಿಲ್ಹೆಯಲ್ಲಿ ತಾಲೂಕಿನ ಸ್ಥಳವೂ ಇರುತ್ತದೆ.

++ ದೇವಗಿರಿಯು ಔರಂಗಾಬಾದದ ಬಳಿಯಲ್ಲಿರುತ್ತದೆ. ಅದು ಕೆಲಕಾಲದವರೆಗೆ ಯಾದವ ಅರಸರ ರಾಜಧಾನಿಯಾಗಿತ್ತು. ೧೨೭೧ರಲ್ಲಿ ಅರಸನಾದ ರಾಮದೇವನೆಂಬ ಯಾದವ ಅರಸನನ್ನು ದಿಲ್ಲಿಯ ಅಲ್ಲಾವುದ್ದೀನನು ೧೨೯೪ರಲ್ಲಿ ಸೋಲಿಸಿ ದೇವಗಿರಿಯ ಮೇಲೆ ತನ್ನ ಸ್ವಾಮಿತ್ವವನ್ನು ಕೂಡ್ರಿಸಿದನು. ಮಹಮ್ಮದ ತಘಲಖನೆಂಬ ಬಾದಶಹನು ಪಟ್ಟವೇರಿದ ಬಳಿಕ (೧೩೨೧) ದೇವಗಿರಿಗೆ ದೌಲತಾಬಾದವೆಂಬ ಹೆಸ

Digitized by ROJA MUTHIAH RESEARCH LIBRARY

ಅಮೋದನೆಂಬ ಮುಸಲ್ಮಾನ ಅರಸು ಆಳುತ್ತಿದ್ದನು. ಅವನು ಜನಾರ್ದನಪಂತರ ಮೇಲಾದ ಗುಣಗಳನ್ನು ಅರಿತುಕೊಂಡು, ಅವರಿಗೆ ತನ್ನ ಮುಖ್ಯಮಂತ್ರಿಯ ಕೆಲಸವನ್ನು ಕೊಟ್ಟಿದ್ದನು. ಅವರು ತಮ್ಮ ರಾಜ್ಯಕಾರಭಾರದ ಕೆಲಸಗಳಲ್ಲಿಯೇ ಮಗ್ನರಾಗಿ ಸೃಷ್ಟಿಕರ್ತನನ್ನು ಮರೆತು ಎಂದೂ ಇರುತ್ತಿದ್ದಿಲ್ಲ. ಇಡಿ ಶುಕ್ರವಾರ ದಿವಸವನ್ನು ಅವರು ದೇವರ ಸೇವೆಯಲ್ಲಿ ಕಳೆಯುವರು. ಆವೊತ್ತಿನ ದಿವಸ ಎಲ್ಲ ಕಚೇರಿಗಳಿಗೆ ಸೂಟಿ ಬಿಡುವರು. ಮಿಕ್ಕ ದಿವಸಗಳಲ್ಲಾದರೂ ಕಾರಭಾರದ ಕೆಲಸಗಳನ್ನು ತೀರಿಸಿಕೊಂಡು, ಉಳಿದ ಹೊತ್ತನ್ನು ಶಾಸ್ತ್ರಗಳನ್ನು ಓದುವದರಲ್ಲಿಯೂ ಶಾಸ್ತ್ರಗಳೊಳಗಿನ ತತ್ವದ ಸಂ

ರಟ್ಟು ಮಲಿಕಕಫೂರನ ಕಾಲದಿಂದ ದಕ್ಷಿಣದಲ್ಲಿ ಸಂಪಾದಿಸಿದ ಬಾದಶಾಹೀ ರಾಜ್ಯವನ್ನೆಲ್ಲ ಒಂದು ಸುಭೆ ಮಾಡಿ, ಅದಕ್ಕೆ ದೌಲತ್ತಾಬಾದಸುಭೆ ಎಂಬ ಹೆಸರಿಟ್ಟನು. ಮುಂದೆ ಇಸ್ಮಾಯಿಲ್ ಉರ್ಫ ನಾಸರುದ್ದೀನನು ದೌಲತ್ತಾಬಾದಿನ ಸುಭೇದಾರನಾದನು. ಅವನ ತರುವಾಯ ಅಲ್ಲಾವುದ್ದೀನ ಹುಸ್ಸೆನ ಗಂಗೂ ಬಾಮನೀ ಎಂಬವನು ಅಲ್ಲಿಯ ಸುಭೇದಾರನಾದನು. ಆವನ ಕಾಲದಿಂದಿತ್ತ ರಾಜ್ಯಕಾರಭಾರದಲ್ಲಿ ಬ್ರಾಹ್ಮಣರ ಪ್ರಾಬಲ್ಯವು ವಿಶೇಷವಾಗುತ್ತ ಬಂತು. ೧೫೨೬ರಲ್ಲಿ ಬ್ರಾಹ್ಮಣೀ ರಾಜ್ಯವು ಮುರಿಯಲು, ಮಲಿಕ ಆಮೋದನೆಂಬವನು ದೌಲತ್ತಾಬಾದಿನ ಒಡೆಯನಾದನು. ಅವನ ಕಾಲದಲ್ಲಿಯೇ ಜನಾರ್ದನಪಂತರು ಮಂತ್ರಿಗಳಾಗಿದ್ದರು.



ಗತಿಗಳನ್ನು ಜನರಿಗೆ ತಿಳಿಸಿಹೇಳುವದರಲ್ಲಿಯೂ, ದತ್ತಾತ್ರೇಯ ಮಹಾಪೂಜೆಯಲ್ಲಿಯೂ ಕಳೆಯುವರು. ಇದಲ್ಲದೆ ಅವರು ದಿನಾಲು ಗೊತ್ತುಮಾಡಿದ ಹೊತ್ತಿನಲ್ಲಿ ಯೋಗಸಾಧನ ಮಾಡುವರು.

ಏಕನಾಥನು ಜನಾರ್ದನಪಂತರ ಮನೆಗೆ ಹೋಗಿ ಬಾಗಿಲಲ್ಲಿದ್ದ ದ್ವಾರಪಾಲಕರಿಗೆ ತಾನು ಬಂದ ಸುದ್ದಿಯನ್ನು ಜನಾರ್ದನಪಂತರಿಗೆ ಅರುಹಬೇಕೆಂದು ಬೇಡಿಕೊಂಡನು. ಅವರು ಕೂಡಲೆ ಜನಾರ್ದನಪಂತರ ಬಳಿಗೆ ಹೋಗಿ, "ಜೀಯಾ ಒಬ್ಬ ಚಿಕ್ಕಬಾಲಕನು ತಮ್ಮ ದರ್ಶನಕ್ಕಾಗಿ ಬಂದಿದ್ದಾನೆ" ಎಂದು ಹೇಳಿದರು. ಇದನ್ನು ಕೇಳಿ ಜನಾರ್ದನಪಂತರು ಚಟ್ಟನೆ ಎದ್ದು ಹೊರಗೆ ಬಂದರು. ಅವರನ್ನು ದೂರದಿಂದಲೇ ನೋಡಿ, ಏಕನಾಥನು ಲಗುಬಗೆಯಿಂದ ಹೋಗಿ ಅವರ ಪಾದಕ್ಕೆರಗಿದನು. ಈ ಚಿಕ್ಕಬಾಲಕನನ್ನು ನೋಡಿ, ಜನಾರ್ದನಪಂತರು ಪರಮಹರ್ಷಿತರಾಗಿ ಪ್ರೀತಿಯಿಂದ ಅವನ ಕೈವಿಡಿದು ಬಳಿಯಲ್ಲಿ ಕೂಡ್ರಿಸಿಕೊಂಡು, ಬಾಲಕಾ, ನೀನಾರು? ನೀನು ನನ್ನ ಬಳಿಗೆ ಒಬ್ಬನೇ ಬಂದಕಾರಣವೇನು? ಎಂದು ಕೇಳಿದರು. ಏಕನಾಥನು ಜನಾರ್ದನಪಂತರ ಶಾಂತಮುದ್ರೆಯನ್ನೂ ಕಾಯಕಾಂತಿಯನ್ನೂ ನೋಡಿ, ಅವರ ದಯಾರ್ದ್ರನುಡಿಗಳನ್ನು ಕೇಳಿ, ಆನಂದದಿಂದ ಪುರಾಣಶ್ರವಣದ ವಿಷಯವಾಗಿ ತನಗಿರುವ ಅಭಿ

Digitized by ROJA MUTHIAH RESEARCH LIBRARY

ರುಚಿಯನ್ನೂ ಬ್ರಹ್ಮಜ್ಞಾನ ಪಡೆಯಬೇಕೆಂಬ ಉತ್ಕಟ ಇಚ್ಛೆಯನ್ನೂ ಪರಮೇಶ್ವರನನ್ನು ಪ್ರತ್ಯಕ್ಷವಾಗಿ ನೋಡುವ ಬಗ್ಗೆ ಮಾಡಿದ ದೃಢವಾದ ಸಂಕಲ್ಪವನ್ನೂ ಅದಕ್ಕೆ ಅನುಗುಣವಾಗಿ ಶಿವಾಲಯದಲ್ಲಿ ಕೇಳಿದಂಥ ಘನಗಂಭೀರವಾದ ದೇವವಾಣಿಯನ್ನೂ ಕುರಿತು ಸರಸಾಗಿ ವರ್ಣಿಸಿದನು. ಜನಾರ್ದನಪಂತರು ಏಕನಾಥನ ಮೃದುಭಾಷಣ ಸೌಮ್ಯಸ್ವಭಾವ ಬ್ರಹ್ಮಜ್ಞಾನ ಪಡೆಯಬೇಕೆಂಬ ಲವಲವಿಕೆ ದೃಢನಿಶ್ಚಯ ಇವುಗಳಿಗೆ ತಲೆದೂಗಿ “ಬಾಲಕಾ, ನೀನು ಚಿಂತೆಮಾಡಬೇಡ. ಸ್ವಸ್ಥಚಿತ್ತದಿಂದಿರು. ಯೋಗ್ಯತೆಯು ನಿನಗೆ ಪ್ರಾಪ್ತವಾದಬಳಿಕ ನಾವು ಉಪದೇಶಮಾಡುವೆವು.” ಎಂದು ವಚನಕೊಟ್ಟು ಅವನನ್ನು ತಮ್ಮ ಬಳಿಯಲ್ಲಿ ಇಟ್ಟುಕೊಂಡರು.

ಜನಾರ್ದನಪಂತರ ಈ ವಚನವನ್ನು ಕೇಳಿ ಏಕನಾಥನಿಗೆ ಮಿತಿಮೀರಿ ಆನಂದವಾಯಿತು. ಆಮೇಲೆ ಅವನು ಗುರುಗಳಸೇವೆಯನ್ನು ಏಕನಿಷ್ಠೆಯಿಂದ ಮಾಡಲಾರಂಭಿಸಿದನು. ಅದು ಹೇಗೆಂದರೆ:— ಅವನು ದಿನಾಲು ಅರುಣೋದಯಕ್ಕೆ ಎದ್ದು, ಸ್ನಾನಸಂಧ್ಯಾದಿಗಳನ್ನು ತೀರಿಸಿಕೊಂಡು, ಜನಾರ್ದನಪಂತರ ದೇವತಾಗೃಹವನ್ನೂ ಏಕಾಂತಮಂದಿರವನ್ನೂ ಉಡುಗಿ ಸ್ವಚ್ಛಮಾಡಿ, ಬಳಿಕ ಅವರ ಸೇವೆಗೆ ಹತ್ತುವನು, ಅಂದರೆ ಅವರಿಗೆ ಸ್ನಾನಕ್ಕೆಹಾಕುವದು, ದೇ-



ವತಾರ್ಚನೆಯ ಸಾಮಾನುಗಳನ್ನು ತಿಕ್ಕಿತೊಳೆದಿಡುವದು, ಹೂದೋಟಕ್ಕೆ ಹೋಗಿ ಹೂವುಗಳನ್ನೂ ಬಿಲ್ವಪತ್ರಿಯನ್ನೂ ತರುವದು, ಗಂಧವನ್ನು ತೇದುಕೊಡುವದು, ಅವರು ಸ್ನಾನದಕಾಲಕ್ಕೆ ಬಿಟ್ಟಬಟ್ಟೆಗಳನ್ನು ಸೆಳೆಯುವದು ಇತ್ಯಾದಿ. ಇಷ್ಟಾದಮೇಲೆ ತನ್ನ ಅಭ್ಯಾಸಕ್ಕೆಹತ್ತುವನು. ಏಕನಾಥನಿಗೆ ಶಾಸ್ತ್ರಗಳಲ್ಲಿ ತಕ್ಕಮಟ್ಟಿಗೆ ಗತಿಯಾದಮೇಲೆ, ಜನಾರ್ದನಪಂತರು ಅವನಿಗೆ ವೇದಗಳನ್ನೂ ಉಪನಿಷದಗಳನ್ನೂ ಕಲಿಸಿದರು. ಇವುಗಳಹೊರತು ಜ್ಞಾನದೇವನೆಂಬ ಯೋಗಿಯಿಂದ ರಚಿತವಾದ ದೊಡ್ಡದೊಡ್ಡ ಗ್ರಂಥಗಳನ್ನು ಅವನಿಂದ ಓದಿಸಿದರು. ಏಕನಾಥನು ತನಗೆ ಬಂದ ಸಂಶಯಗಳನ್ನು ಆಗಾಗ್ಗೆ ಗುರುಗಳಿಂದ ಕೇಳಿಕೊಂಡು ತಿಳಕೊಳ್ಳುವನು. ಜನಾರ್ದನಪಂತರು ಏಕನಾಥನ ಕುಶಾಗ್ರಬುದ್ಧಿಯನ್ನೂ ದೇವರ ಮೇಲಿನ ನಿಷ್ಕಪಟವಾದಭಕ್ತಿಯನ್ನೂ ಅಧ್ಯಯನದಲ್ಲಿದ್ದ ಆಸಕ್ತಿಯನ್ನೂ ಕಂಡು ಹಿರಿಹಿರಿ ಹಿಗ್ಗುವರು. ಅವರು ಹೋದಲ್ಲಿಗೆ ಅವನನ್ನು ಸಂಗಡ ಕರಕೊಂಡು ಹೋಗುವರು. ಏಕನಾಥನು ರಾಜ್ಯಕಾರಭಾರದ ಕೆಲಸಗಳಲ್ಲಿಯಾದರು ಗುರುಗಳಿಗೆ ನೆರವಾಗುವನು. ಒಂದು ಪ್ರಸಂಗದಲ್ಲಿ ಹಗೆಗಳ ದಂಡು ದೌಲತಾಬಾದಿನಮೇಲೆ ಒಮ್ಮಿಂದೊಮ್ಮೆ ಬಂದು ಬಿತ್ತು. ಆಹೊತ್ತಿಗೆ ಜನಾರ್ದನಪಂತರು ಯೋಗದ

Digitized by ROJA MUTHIAH RESEARCH LIBRARY

ಲ್ಲಿ ತೊಡಗಿದ್ದರು. ಇದನ್ನು ನೋಡಿ ಏಕನಾಥನು ತಡಮಾಡದೆ ಚಿಲಕತ್ತನ್ನು ತೊಟ್ಟು, ಶಿರಸ್ತ್ರಾಣವನ್ನು ಧರಿಸಿ, ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ಕುದುರೆಯನ್ನೇರಿ ಸೇನೆಯೊಂದಿಗೆಹೋಗಿ, ಎದುರಾಳಿಗಳಕೂಡ ಕಲಿತನದಿಂದ ಕಾದಿ ಅವರನ್ನು ಸೋಲಿಸಿದನು!! ಈಮೇರೆಗೆ ಏಕನಾಥನು ಗುರುಸೇವೆಯನ್ನು ೧೨ ವರ್ಷಗಳವರೆಗೆ ಮಾಡಿ ತನ್ನ ಅಧ್ಯಯನವನ್ನು ಮುಗಿಸಿದನು. ಇದನ್ನು ನೋಡಿ ಜನಾರ್ದನಪಂತರು ಕಡೆಯಲ್ಲಿ ಅವನಿಗೆ ಬ್ರಹ್ಮಜ್ಞಾನದ ಉಪದೇಶವನ್ನು ಮಾಡಿದರು.

ದೌಲತಾಬಾದಿನಿಂದ ೪ ಮೈಲುಗಳ ಮೇಲೆ ಒಂದು ಗುಡ್ಡವಿರುತ್ತದೆ. ಆ ಗುಡ್ಡಕ್ಕೆ ಜನಾರ್ದನಪಂತರು ಶುಕ್ರವಾರಕ್ಕೊಮ್ಮೆ ಹೋಗುತ್ತಿದ್ದರು. ಏಕನಾಥನಿಗೆ ಆತ್ಮಜ್ಞಾನ ಮಾಡಿಕೊಟ್ಟ ತರುವಾಯ ಒಂದು ಶುಕ್ರವಾರ ಅವನನ್ನು ಸಂಗಡ ಕರೆದುಕೊಂಡು ಆ ಗುಡ್ಡಕ್ಕೆ ಹೊರಟರು. ಮಾರ್ಗವು ಚೆನ್ನಾಗಿದ್ದಿಲ್ಲ. ಗುಡ್ಡವು ಬಹಳ ಕಡದು ಇದ್ದುದರಿಂದ ಏರುವವರಿಗೆ ಆಯಾಸವಾಗುತ್ತಿತ್ತು. ಆದರೆ ಆ ಗುಡ್ಡದ ಮೇಲಿನ ಪಕ್ಷಿಗಳ ಮಂಜುಳವಾದ ಶಬ್ದಗಳೂ ನರ್ಮದಾನದಿಯ ತಡಸಲಿನಿಂದುಂಟಾದ ದೊಡ್ಡ ಸಪ್ಪಳವೂ ಸುತ್ತಲು ಅರಳಿದ ಸುಂದರವಾದ ಹೂಗಳ ಮಕರಂದವೂ ಒಟ್ಟುಗೂಡಿ ಮಾರ್ಗಕ್ರಮಣದಿಂ



ದುಂಟಾದ ಏಕನಾಥನ ಆಯಾಸವನ್ನು ತೊಲಗಿಸಿದವು. ಆ ಗುಡ್ಡವನ್ನು ಏರಿ ಹೋದಮೇಲೆ ಜನಾರ್ದನಪಂತರು ಏಕನಾಥನನ್ನು ಒಂದು ಸರೋವರಕ್ಕೆ ಕರಕೊಂಡು ಹೋದರು. ಆ ಸರೋವರದ ಸುತ್ತಲು ವಿಧವಿಧದ ವೃಕ್ಷಗಳು ನಿಬಿಡವಾಗಿ ಬೆಳೆದಿದ್ದವು. ಆ ಗಿಡಗಳಿಗೆ ಹಬ್ಬಿದ ಬಳ್ಳಿಗಳಿಗೆ ಹೂಗೊಂಚಲಗಳು ಇಳಿಬಿದ್ದಿದ್ದವು. ಸರೋವರದ ನೀರು ಸ್ಫಟಿಕದಂತೆ ತಿಳಿಯಾಗಿದ್ದವು. ಅದರ ಸಮೀಪದಲ್ಲಿ ಒಂದು ಅತ್ತಿಯಮರವಿತ್ತು. ಅದಕ್ಕೆ ತರತರದ ಬಳ್ಳಿಗಳು ದಟ್ಟವಾಗಿ ಹಬ್ಬಿದ್ದವು. ಈ ಗಿಡದ ಬುಡದಲ್ಲಿ ಸುಂದರವಾದ ಒಂದು ದತ್ತಾತ್ರೇಯಮೂರ್ತಿ ಇತ್ತು. ಜನಾರ್ದನಪಂತರೂ ಏಕನಾಥನೂ ಆ ಸರೋವರದಲ್ಲಿ ಸ್ನಾನ ಮಾಡಿ, ಅತ್ತಿಯಮರದ ಬುಡದಲ್ಲಿದ್ದ ಮೂರ್ತಿಯ ಬಳಿಗೆ ಬಂದರು. ಜನಾರ್ದನಪಂತರು ಆ ಮೂರ್ತಿಯನ್ನು ಏಕಮನಸಿನಿಂದ ಪೂಜಿಸಿ, ಏಕನಾಥನಿಗೆ ತುಸು ದೂರ ಕೂಡ್ರಲಿಕ್ಕೆ ಹೇಳಿ, ಯೋಗದಲ್ಲಿ ತೊಡಗಿದರು. ನಡುವೆ ಸಪ್ಪಳವಾದದ್ದನ್ನು ಕೇಳಿ ಕಣ್ಣುತೆರೆದು ನೋಡುತ್ತಾರೆ– ದತ್ತಾತ್ರೇಯು ಪ್ರತ್ಯಕ್ಷವಾಗಿ ನಿಂತಿದ್ದಾನೆ. ಅವನನ್ನು ಕಂಡು ಜನಾರ್ದನಪಂತರು ಹರ್ಷಪುಳಕಿತರಾಗಿ ಪೂರ್ಣಭಕ್ತಿಯಿಂದ ಸಾಷ್ಟಾಂಗನಮಸ್ಕಾರ ಮಾಡಿ, ಏಕನಾಥನನ್ನು ಕರೆದು ಅವನಿಗೂ ನಮಸ್ಕಾರ

Digitized by ROJA MUTHIAH RESEARCH LIBRARY

ಮಾಡಹೇಳಿದರು. ಏಕನಾಥನು ಶುದ್ಧಾಂತಃಕರಣದಿಂದ ಅಡ್ಡಬೀಳಲು ಪರಮಾತ್ಮನು ಏಕನಾಥನನ್ನು ಎಬ್ಬಿಸಿ, ಅವನ ತಲೆಯಮೇಲೆ ಕೈಯಿಟ್ಟು ಆಶೀರ್ವದಿಸಿ "ನೀನು ಅಸಾಧಾರಣ ಪುರುಷನಾಗುವಿ. ನಿನ್ನ ವಕ್ತೃತ್ವದ ಮತ್ತು ಕವಿತ್ವದ ಕೀರ್ತಿಗಳು ಸುತ್ತಲು ಹಬ್ಬುವವು. ಭಾಗವತರಾಮಾಯಣಗಳ ಟೀಕೆಗಳು ನಿನ್ನಿಂದ ಪ್ರಸಿದ್ಧವಾಗುವವು. ನೀನು ಎಷ್ಟೋ ಮಹತ್ಕೃತ್ಯಗಳನ್ನು ಮಾಡುವಿ. ಸುಧಾರಕನೆಂಬ ಹೆಸರನ್ನು ಹೊಂದುವಿ" ಎಂದು ವರಕೊಟ್ಟು ಮಾಯವಾದನು. ಆಮೇಲೆ ಜನಾರ್ದನಪಂತರು ಏಕನಾಥನನ್ನು ಆಲಿಂಗಿಸಿ, ಮಗನೇ ನಿನ್ನ ಕೋರಿಕೆಯು ಈಡೇರಿದ್ದನ್ನು ನೋಡಿ ನನಗೆ ಮಿತಿಮೀರಿ ಆನಂದವಾಗಿದೆ. ನಾನು ಇಂದಿಗೆ ಕೃತಾರ್ಥನಾದೆನು. ಶಿಷ್ಯನೇ ನಡೆ, ಮನೆಗೆ ಹೋಗುವಾ ಎಂದು ಅವನನ್ನು ಕರಕೊಂಡು ಜನಾರ್ದನಪಂತರು ಮನೆಗೆ ತಿರುಗಿ ಬಂದರು.

ಕೆಲವು ದಿವಸಗಳ ತರುವಾಯ ಜನಾರ್ದನಪಂತರು ಶಿಷ್ಯನನ್ನೊಡಗೊಂಡು ಯಾತ್ರೆಗೆ ಹೊರಟರು. ಅವರು ಮೊದಲು ನಾಶಿಕಕ್ಕೆ ಹೋದರು. ನಾಶಿಕವು ಶ್ರೀರಾಮಚಂದ್ರನ ವನವಾಸಸ್ಥಾನವಾಗಿದೆ. ಅದು ಗೋದಾವರಿಯ ದಂಡೆಯ ಮೇಲಿರುತ್ತದೆ. ನಾಶಿಕದಲ್ಲಿ ಅಸಂಖ್ಯ ದೇವಸ್ಥಾನಗಳಿರುವ



ದರಿಂದ ಅದು "ದಕ್ಷಿಣಕಾಶಿ" ಎಂದೆನಿಸಿಕೊಳ್ಳುತ್ತದೆ. ಏಕನಾಥನು ಗೋದಾವರೀನದಿಯನ್ನೂ ಅದಕ್ಕೆ ಕಟ್ಟಿರುವ ಸುಂದರವಾದ ಸೋಪಾನಗಳನ್ನೂ ಅಲ್ಲಿರುವ ವಿಶೇಷಸ್ಥಳಗಳನ್ನೂ ನೋಡಿ ಬಹು ಆನಂದಬಟ್ಟನು. ಜನಾರ್ದನಪಂತರು ನಾಶಿಕದಲ್ಲಿ ವರ್ತಿಸಿದ ಮಹತ್ಕೃತ್ಯಗಳನ್ನು ಶಿಷ್ಯನಿಗೆ ವಿವರಿಸಿದರು. ಅವರು ಅವನಿಗೆ ನಾಶಿಕದ ಎದುರಿಗೆ ಇರುವ ಪಂಚವಟಿ ಅರಣ್ಯವನ್ನು ತೋರಿಸಿ, ಅಲ್ಲಿ ಶ್ರೀರಾಮಚಂದ್ರನು ಸೀತಾದೇವಿಯೊಡನೆ ತನ್ನ ವನವಾಸದ ಹಲವು ದಿವಸಗಳನ್ನು ಕಳೆದನೆಂತಲೂ ಅದೇ ಸ್ಥಳದಿಂದ ರಾವಣನು ಸೀತೆಯನ್ನು ಲಂಕೆಗೆ ಕದ್ದೊಯ್ದನೆಂತಲೂ ಹೇಳಿದರು. ಆಮೇಲೆ ಅವನನ್ನು ರಾಮನ ಪ್ರೀತಿಯ ತಮ್ಮನಾದ ಲಕ್ಷ್ಮಣನ ಹೆಸರಿನಿಂದ ಪ್ರಸಿದ್ಧವಾದ ತೋಪಬನವೆಂಬ ಅರಣ್ಯಕ್ಕೆ ಕರಕೊಂಡು ಹೋದರು. ಅದು ಪಂಚವಟಿಯಿಂದ ಎರಡು ಮೈಲಿನ ಮೇಲಿದೆ. ಲಕ್ಷ್ಮಣನು ದಿನ ಬಂದಕ್ಕೆ ಈ ಅರಣ್ಯದೊಳಗಿನ ಪಕ್ವಫಲಗಳನ್ನೂ ಕಂದಮೂಲಾದಿಗಳನ್ನೂ ತೆಗೆದುಕೊಂಡು ಹೋಗಿ, ರಾಮನಿಗೂ ಸೀತಾದೇವಿಗೂ ಕೊಡುತ್ತಿದ್ದನು. ಹೂವುಗಳ ಮಕರಂದದಿಂದಲೂ ಪಕ್ಷಿಗಳ ಇಂಪಾದ ಸ್ವರದಿಂದಲೂ ಅದರ ನೆರೆಯಲ್ಲಿದ್ದ ಗೋದಾವರಿಯ ತಡಸಲಿನ ಸಪ್ಪಳದಿಂದಲೂ ಈ ವನವು ಬಹು ರಮ

Digitized by ROJA MUTHIAH RESEARCH LIBRARY

ಣೀಯವಾಗಿರುವದು. ಈ ವನದಲ್ಲಿ ಜನಾರ್ದನಪಂತರೂ ಏಕನಾಥನೂ ಕೆಲವು ದಿವಸ ನಿಂತರು. ಏಕನಾಥನು ಅಲ್ಲಿಯ ಸುಂದರವಾದ ಸೃಷ್ಟಿಚಮತ್ಕಾರಗಳನ್ನು ನೋಡಿದ್ದರಿಂದಲೂ ಅಲ್ಲಿ ವರ್ತಿಸಿದ ಪುರಾಣಪ್ರಸಿದ್ಧವಾದ ಸಂಗತಿಗಳನ್ನು ಗುರುಗಳಿಂದ ಕೇಳಿದ್ದರಿಂದಲೂ ಅವನ ಮನಸಿನಲ್ಲಿ, ಸೃಷ್ಟಿಕರ್ತನ ಅತ್ಯಗಾಧವಾದ ಶಕ್ತಿಯೂ ಜಾಣ್ಮೆಯೂ ತನ್ನ ಅಣ್ಣನಾದ ರಾಮಚಂದ್ರನಿಗೆ ತೋರಿಸಿದ ಬಂಧುಪ್ರೀತಿಯೂ ತೋಪಬನದಲ್ಲಿ ಲಕ್ಷ್ಮಣನು ದೇವರ ಧ್ಯಾನದಲ್ಲಿ ಕಾಲಹರಣ ಮಾಡಿದ್ದೂ ಮೋಸದಿಂದ ಬಂದು ಅವನನ್ನು ಮೋಹಪಾಶದಲ್ಲಿ ಕೆಡಹುವ ಪ್ರಯತ್ನ ಮಾಡಿದ ಶೂರ್ಪನಖಿಯ ಮೊಲೆಮೂಗುಗಳನ್ನು ಕೊಯ್ದು ತೋರಿಸಿದಂಥ ಅವನ ಧೈರ್ಯವೂ, ಒಮ್ಮೆಲೇಬಂದು ಅವನನ್ನು ಆನಂದಾಶ್ಚರ್ಯಗಳಲ್ಲಿ ಮುಳುಗಿಸಿದವು.

ತೋಪಬನದಿಂದ ಅವರು ತ್ರ್ಯಂಬಕಕ್ಕೆ ಹೋದರು. ಈ ಸ್ಥಳವು ಪುಣ್ಯಕ್ಷೇತ್ರವೆಂದೆನಿಸಿಕೊಳ್ಳುತ್ತದೆ. ಇಲ್ಲಿ ತ್ರ್ಯಂಬಕೇಶ್ವರನ ದೇವಾಲಯ ಉಂಟು. ಈ ದೇವಾಲಯದ ಮುಂದೆ ದೊಡ್ಡದೊಡ್ಡ ಮರಗಳ ನಿಬಿಡವಾದ ಛಾಯೆಯೂ ಸುತ್ತುಮುತ್ತು ಎತ್ತರವಾದ ಗುಡ್ಡಗಳ ಆವರಣವೂ ಇರುವದರಿಂದ ಈ ದೇವಾಲಯಕ್ಕೆ ಅತಿ ರಮಣೀಯತ್ವವುಂಟಾ



ಗಿದೆ. ಈ ಗುಡ್ಡಗಳೊಳಗಿನ ಒಂದು ಗುಡ್ಡದಲ್ಲಿ ಗೋದಾವರಿಯ ಉಗಮಸ್ಥಾನವಿರುತ್ತದೆ. ಮತ್ತೊಂದು ಗುಡ್ಡಕ್ಕೆ ನಿಬ್ರಥಿದೇವನೆಂಬ ಸಾಧುಪುರುಷನ ಹೆಸರು ಬಿದ್ದದೆ. ಅವನು ಗಯಿರೀನಾಥನೆಂಬ ಯೋಗಿಯ ಶಿಷ್ಯನು. ಗಯಿರೀನಾಥನು ಇದೇ ಗುಡ್ಡದೊಳಗಿನ ಒಂದುಗವಿಯಲ್ಲಿ ವಾಸಿಸುತ್ತಿದ್ದನು. ಜ್ಞಾನದೇವನು ತಪಶ್ಚರ್ಯ ಮಾಡಿ ದೇವತಾನುಗ್ರಹ ಪಡೆದ ಸ್ಥಳವು ಇದೇ. ಈ ಸ್ಥಳಗಳ ಸಂಬಂಧವಾದ ಸಂಗತಿಗಳನ್ನೆಲ್ಲ ಜನಾರ್ದನಪಂತರು ಶಿಷ್ಯನಿಗೆ ವಿವರಿಸಿ, ಅಲ್ಲಿಂದ ಅವನೊಂದಿಗೆ ನಾಶಿಕಕ್ಕೆ ಮರಳಿಬಂದು, ಪಂಚವಟಿಯಲ್ಲಿ ತುಸದಿವಸ ನಿಂತರು. ಈಹೊತ್ತಿಗೆ ಏಕನಾಥನು ಗುರುಗಳ ಅಪ್ಪಣೆಯಿಂದ ಶ್ರೀಮದ್ಭಾಗವತಕ್ಕೆ ಸರಸಾದ ಟೀಕೆಯನ್ನು ಬರೆದು, ಗುರುದಕ್ಷಿಣೆಯ ರೂಪದಿಂದ ಅದನ್ನು ಗುರುಗಳಿಗೆ ಸಲ್ಲಿಸಿದನು. ಇದೇ ಅವನ ಮೊದಲನೆಯ ಗ್ರಂಥವು.

ಆಮೇಲೆ ಅವರು ದೌಲತಾಬಾದಿಗೆ ತಿರುಗಿಬಂದರು. ಕೆಲವುದಿವಸಗಳಾದಮೇಲೆ ಒಂದು ದಿವಸ ಜನಾರ್ದನಪಂತರು ಏಕನಾಥನನ್ನು ಹತ್ತರಕರೆದು ಹೇಳಿದ್ದೇನೆಂದರೆ:—ಈಗ ನಿನ್ನ ಅಭ್ಯಾಸವು ಪೂರ್ಣವಾಯಿತು. ದೇವವಾಣಿಗೆ ಸರಿಯಾಗಿ ಬ್ರಹ್ಮವಿದ್ಯೆಯೂ ದತ್ತಾತ್ರೇಯ ದರ್ಶನವೂ ನಿನಗೆ ಉಂಟಾಗಿ

Digitized by ROJA MUTHIAH RESEARCH LIBRARY

ವೆ. ಗುರುಗಳ ಹತ್ತರ ವೇದಾಧ್ಯಯನ ಮಾಡಿದಮೇಲೆ ತೀರ್ಥಯಾತ್ರೆಗೆ ಹೋಗಬೇಕೆಂಬ ಸಾಂಪ್ರದಾಯ ಉಂಟು. ಅದೇಮೇರೆಗೆ ಈಗ ನೀನು ಪುಣ್ಯಕ್ಷೇತ್ರಗಳಿಗೆ ಹೋಗಬೇಕು. ಮಾರ್ಗದಲ್ಲಿ ಅಲ್ಲಲ್ಲಿಗೆ ಇರುವ ಆಶ್ಚರ್ಯಕರವಾದ ಸೃಷ್ಟಿಚಮತ್ಕಾರಗಳನ್ನು ನೋಡುವದರಿಂದ, ದೇವರ ಅತ್ಯಗಾಧವಾದ ಶಕ್ತಿಯೂ ಅವನ ಅನುಪಮೇಯವಾದ ಜಾಣ್ಮೆಯೂ ಅವನ ಜೋಡಿಲ್ಲದ ಮಹಿಮೆಯೂ ಅವನ ದೊಡ್ಡಮನಸೂ ನಿನಗೆ ತಿಳಿಯುವವು. ಪುಣ್ಯಕ್ಷೇತ್ರಗಳಲ್ಲಿರುವ ಜ್ಞಾನಿಗಳಕೂಡ ಸಂಭಾಷಣೆ ಮಾಡುವದರಿಂದಲೂ ಅವರ ಉಪದೇಶಗಳನ್ನು ಕೇಳುವದರಿಂದಲೂ ನಿನ್ನ ಜ್ಞಾನವು ಮತ್ತಿಷ್ಟು ಬೆಳೆಯುವದು. ಬೇರೆಬೇರೆ ದೇಶಗಳಲ್ಲಿ ಕಂಡುಬರುವ ಜನರ ನಡೆನುಡಿಗಳೂ ದೇಶಸಾಂಪ್ರದಾಯಗಳೂ ನಿನ್ನ ಅನುಭವವನ್ನು ಹೆಚ್ಚಿಸುವವು. ಇದರಿಂದ ನಿನಗೆ ಮುಂದೆ ಬಹುಪ್ರಯೋಜನವಾಗುವದು. ಅವರು ಮತ್ತೆ ಹೇಳಿದ್ದೇನೆಂದರೆ:—ನನ್ನ ಪ್ರಿಯಶಿಷ್ಯನೇ, ನಿನ್ನ ತೀರ್ಥಾಟನವು ಮುಗಿದಮೇಲೆ ನೀನು ಊರಿಗೆ ಹೋಗಿ ಮದುವೆಯಾಗಿ ಸಂತೋಷದಿಂದ ಕಾಲಕಳೆಯಬೇಕು. ಮುಕ್ತಿಯನ್ನು ಪಡೆಯಬೇಕಾದರೆ ಸಂಸಾರವನ್ನು ತೊರೆಯುವ ಕಾರಣವಿಲ್ಲ. ಸಂಸಾರಿಕನಾಗಿದ್ದು, ದೇವರಲ್ಲಿ ನಿಷ್ಕಪಟವಾದವಿಶ್ವಾಸವ



ನ್ನೂ ನಿಶ್ಚಲವಾದಭಕ್ತಿಯನ್ನೂ ಇಟ್ಟು, ಸ್ವಾರ್ಥಪರತ್ವವನ್ನು ಜಡಿದೋಡಿಸಿ, ಪರೋಪಕಾರದಲ್ಲಿ ನಿರತನಾಗಿದ್ದರೆ ಮುಕ್ತಿ ದೊರಕುವದು. ಗುರುಗಳ ಈ ನುಡಿಯನ್ನು ಕೇಳಿದಕೂಡಲೆ ಏಕನಾಥನ ಕಣ್ಣುಗಳಿಂದ ನೀರು ತಮ್ಮಷ್ಟಕ್ಕೆತಾವೇ ಸುರಿಯಹತ್ತಿದವು. ಬೇಗನೆ ಗುರುಗಳನ್ನಗಲಿಹೋಗುವ ಪ್ರಸಂಗಬಂತೆಂದು ತಿಳಿದು ದೊಡ್ಡಧ್ವನಿತೆಗೆದು ಅಳಹತ್ತಿದನು. ಇದನ್ನು ನೋಡಿ ಜನಾರ್ದನಪಂತರ ಕಣ್ಣುಗಳಲ್ಲಿಯೂ ನೀರು ಬಂದವು. ದುಃಖದಿಂದ ಅವರ ಗಂಟಲು ಶಿರ ಉಬ್ಬಿತು. ಮಾತುಗಳು ಕಟ್ಟಾದವು. ಈ ಗುರುಶಿಷ್ಯರು ಒಬ್ಬರಮುಖವನ್ನೊಬ್ಬರು ನೋಡಿ, ತವಕದಿಂದ ಹೋದವರೇ ಪರಸ್ಪರ ದೃಢಾಲಿಂಗನವನ್ನುಕೊಟ್ಟರು. ಗುರುಗಳ ಆಜ್ಞೆಯನ್ನು ೧೨ ವರ್ಷಗಳವರೆಗೆ ಅಕ್ಷರಶಃ ಪಾಲಿಸಿದಂಥ ಏಕನಾಥನು ಯಾತ್ರೆಗೆಹೋಗಲಿಕ್ಕೆ ಸಿದ್ಧನಾದನು. ಅವನು ಬೈರಾಗಿಯ ವೇಷವನ್ನು ಧರಿಸಿ, ಗುರುಗಳ ಅಪ್ಪಣೆಯನ್ನು ತೆಗೆದುಕೊಂಡು ತೀರ್ಥಾಟನಕ್ಕೆ ಹೊರಟನು.

ಏಕನಾಥನ ಅಜ್ಜಮ್ಮಂದಿರು ಈ ೧೩ ವರ್ಷಗಳನ್ನು ಬಹಳಕಷ್ಟದಿಂದ ಕಳೆದರು. ಇಷ್ಟು ದಿವಸಗಳವರೆಗೆ ಏಕನಾಥನ ಸುದ್ದಿಯೇ ಅವರಿಗೆ ಇದ್ದಿಲ್ಲ. ಕಟ್ಟಕಡೆಗೆ ಏಕನಾಥನಿಗೆ ದೌಲತಾಬಾ

Digitized by ROJA MUTHIAH RESEARCH LIBRARY

ದಿನ ಹಾದಿಯನ್ನು ಹೇಳಿಕೊಟ್ಟ ಪುರಾಣಿಕನು ಪೈಠಣಕ್ಕೆ ತಿರುಗಿ ಬಂದನು. ಅವನು "ನಿಮ್ಮ ಮೊಮ್ಮಗನು ಜನಾರ್ದನಪಂತರ ಬಳಿಯು ವಿದ್ಯಾಭ್ಯಾಸಮಾಡುವ ಉದ್ದೇಶದಿಂದ ದೌಲತ್ತಾಬಾದಿಗೆ ಹೋಗಿದ್ದಾನೆ" ಎಂದು ಚಕ್ರಪಾಣಿಗೆ ತಿಳಿಸಿದನು. ಇದನ್ನು ಕೇಳಿದಕೂಡಲೇ ಆ ಮುಪ್ಪಿನ ಅಜ್ಜಮ್ಮಂದಿರಿಗೆ ಎಷ್ಟು ಆನಂದವಾಗಿರಬಹುದೆಂಬದನ್ನು ವಾಚಕರೇ ತರ್ಕಿಸಬಹುದು. ಮೊಮ್ಮಗನ ಮೋರೆಯನ್ನು ಯಾವಾಗ್ಗೆ ನೋಡುವೆವೋ ಎಂಬ ಉತ್ಕಟ ಇಚ್ಛೆಯು ಅವರಲ್ಲಿ ಹುಟ್ಟಿತು. ಆದರೆ ಇದು ಸುಲಭವಾಗಿ ತೃಪ್ತಿಯಾಗುವಂತೆ ಇದ್ದಿಲ್ಲ. ಯಾಕೆಂದರೆ ಚಕ್ರಪಾಣಿಯು ತೀರಮುಪ್ಪಿನವನಾಗಿದ್ದನು. ಅದರಲ್ಲಿ ಮೊಮ್ಮಗನ ಚಿಂತೆಯಿಂದ ಅವನೂ ಅವನ ಹೆಂಡತಿಯೂ ಕೃಶರಾಗಿದ್ದರು. ದೌಲತ್ತಾಬಾದಿಗೆ ಹೋಗುವಷ್ಟು ಬಲವು ಅವರಲ್ಲಿದ್ದಿಲ್ಲ. ಆದುದರಿಂದ ಚಕ್ರಪಾಣಿಯು ದೌಲತ್ತಾಬಾದಿಗೆ ಹೋಗಿ ಮೊಮ್ಮಗನ ಮೋರೆಯನ್ನು ನೋಡುವದು ಅಸಾಧ್ಯವೆಂದು ತಿಳಿದುಕೊಂಡು, ಏಕನಾಥನಿಗೆ ಒಂದುಪತ್ರವನ್ನಾದರೂ ಬರೆದು ಕಳುಹಬೇಕೆಂದು ಯೋಚಿಸಿದನು. ಆದರೆ ಪತ್ರವನ್ನೊಯ್ಯುವ ಆಳಿನ ಕೂಲಿಯನ್ನು ಕೊಡಲಿಕ್ಕೆ ಸಹ ಹಣವಿಲ್ಲದ್ದನ್ನು ಕಂಡು, ಬಹುಖಿನ್ನನಾಗಿ ಈ ಎಲ್ಲತೊಂದರೆಗಳನ್ನು



ಆ ಪುರಾಣಿಕನಿಗೆ ತಿಳಿಸಿದನು. ಇದನ್ನು ಕೇಳಿ ಅವನು ಚಕ್ರಪಾಣಿಯ ವಿಷಯವಾಗಿ ಕನಿಕರಬಟ್ಟು, ಹಿರಿಯರೇ ನೀವು ಏನೂ ಚಿಂತೆಮಾಡಬೇಡರಿ, ನಾನೇ ದೌಲತ್ತಾಬಾದಿಗೆಹೋಗಿ, ನಿಮ್ಮ ಮೊಮ್ಮಗನನ್ನು ಕರಕೊಂಡು ಬಂದು, ನಿಮಗೆ ಭೆಟ್ಟಿಮಾಡಿಸುವೆನು ಎಂದು ಅವನಿಗೆ ಸಮಾಧಾನಹೇಳಿದನು. ಅದಕ್ಕೆ ಚಕ್ರಪಾಣಿಯು ತುಂಬಾ ಸಂತೋಷಬಟ್ಟು, ಅವನ ಉಪಕಾರವನ್ನು ಪರಿಪರಿಯಿಂದ ನೆನಿಸಿದನು.

ಆ ಪುರಾಣಿಕನು ವಚನಕೊಟ್ಟಮೇರೆಗೆ ದೌಲತ್ತಾಬಾದಿಗೆಹೋಗಿ, ಜನಾರ್ದನಪಂತರನ್ನು ಕಂಡು, ಚಕ್ರಪಾಣಿಯೂ ಅವನ ಹೆಂಡತಿಯೂ ಏಕನಾಥನ ದೆಸೆಯಿಂದ ದುಃಖಬಡುವದನ್ನು ಅವರಿಗೆ ತಿಳಿಸಿದನು. ಅದನ್ನು ಕೇಳಿ ಜನಾರ್ದನಪಂತರು ಬಹಳ ಕಳವಳಗೊಂಡು ಆ ಪುರಾಣಿಕನಿಗೆ ಹೇಳಿದ್ದು—"ಏಕನಾಥನು ಕ್ಷೇಮದಿಂದ ಇದ್ದಾನೆ, ಅವನು ಸದ್ಗುಣಿಯೂ ಸದಾಚಾರಸಂಪನ್ನನೂ ಜ್ಞಾನಿಯೂ ಆಗಿದ್ದಾನೆ. ತೀರ್ಥಯಾತ್ರೆಯನ್ನು ಮಾಡಿಕೊಂಡು ಬೇಗನೆ ಪೈಠಣಕ್ಕೆ ಬರುವನು. ಈ ವೃತ್ತಾಂತವನ್ನು ಏಕನಾಥನ ಅಜ್ಜಮ್ಮಂದಿರಿಗೆ ತಿಳಿಸಬೇಕು." ಇದಕ್ಕೆ ಆ ಪುರಾಣಿಕನು ಪ್ರತ್ಯುತ್ತರವಾಗಿ ಹೇಳಿದ್ದು—ಪೂಜ್ಯರೇ, ಏಕನಾಥನು ಹಿಂದುಸ್ಥಾನದೊಳಗಿನ ಎಲ್ಲಕ್ಷೇತ್ರಗಳಿಗೆ ಹೋಗಿ ಊರಿಗೆ ಬರಲಿಕ್ಕೆ ಅವನಿಗೆ

Digitized by ROJA MUTHIAH RESEARCH LIBRARY
ಕ AKA M94

ಹಲವು ವರ್ಷಗಳು ಹತ್ತುವವು. ಅಷ್ಟು ಅವಧಿಯುವ
ರೆಗೆ, ದಿನಗತಿಸಿದ ಅವನ ಅಜ್ಜಮ್ಮಂದಿರು ಬದುಕು
ವರೋ ಇಲ್ಲವೋ ಸಂಶಯುವದೆ. ಆದದ್ದರಿಂದ ತಾ
ವು ಹೇಗಾದರೂಮಾಡಿ ಏಕನಾಥನು ಬೇಗನೆ ಅಜ್ಜ
ಮ್ಮಂದಿರನ್ನು ಕಾಣುವ ಉಪಾಯುವನ್ನು ಯೋಜಿಸ
ಬೇಕೆಂದು ಬೇಡಿಕೊಂಡನು. ಅದಕ್ಕೆ ಜನಾರ್ದನ
ಪಂತರು, ಏಕನಾಥನು ಉತ್ತರಹಿಂದುಸ್ಥಾನದೊಳ
ಗಿನ ಪುಣ್ಯಸ್ಥಳಗಳನ್ನು ನೋಡಿಕೊಂಡು ದಕ್ಷಿಣ
ಹಿಂದುಸ್ಥಾನಕ್ಕೆ ತೆರಳುವಾಗ ಬಹುಶಃ ಪೈಠಣಕ್ಕೆ
ಹೋಗಬಹುದೆಂದು ಆಲೋಚಿಸಿ, ಏಕನಾಥನಿಗೊಂ
ದು ಪತ್ರವನ್ನು ಬರೆದು ಪುರಾಣಿಕನ ವಶಕ್ಕೆಕೊ
ಟ್ಟು ಹೇಳಿದ್ದೇನೆಂದರೆಃ—"ನೀವು ಈ ಪತ್ರವನ್ನು
ಚಕ್ರಪಾಣಿಯ ಕೈಯಲ್ಲಿಕೊಟ್ಟು, ಏಕನಾಥನು ಪೈ
ಠಣಕ್ಕೆ ಬರುವದನ್ನು ಕಾಯುತ್ತಲಿದ್ದು, ಅವನು
ಬಂದಕೂಡಲೆ ಈ ಪತ್ರವನ್ನು ಅವನಿಗೆ ಕೊಡಲಿಕ್ಕೆ
ತಿಳಿಸಿರಿ. ಏಕನಾಥನು ಈ ಪತ್ರವನ್ನು ನೋಡಿ
ಮುಂದಕ್ಕೆ ಹೋಗುವದನ್ನು ಬಿಟ್ಟು ಮನೆಗೆ ಬರುವ
ನು." ಆವೇಳೆ ಪುರಾಣಿಕನು ಜನಾರ್ದನಪಂತರ
ಅಪ್ಪಣೆಯನ್ನು ತೆಗೆದುಕೊಂಡು ಪೈಠಣಕ್ಕೆ ತೆರ
ಳಿದನು.

ಅವನು ಪೈಠಣಕ್ಕೆಬಂದು, ಆ ಪತ್ರವನ್ನು ಚಕ್ರಪಾ
ಣಿಯು ಕೈಯಲ್ಲಿಕೊಟ್ಟು, ಜನಾರ್ದನಪಂತರ ಮಾ



ತುಗಳನ್ನು ಅವನಿಗೆ ತಿಳಿಸಿದನು. ಚಕ್ರಪಾಣಿಯು
ಏಕನಾಥನ ಕುಶಲವೃತ್ತಾಂತವನ್ನೂ ಅವನು ಮ
ಹಾಜ್ಞಾನಿಯಾಗಿರುವದನ್ನೂ ಕೇಳಿ ಸಂತೋಷಬ
ಟ್ಟು, ಈ ಸುದ್ದಿಯನ್ನು ತನ್ನ ಸುಶೀಲಹೆಂಡತಿಗೆ
ತಿಳಿಸಿ, ಅವಳನ್ನು ಸಮಾಧಾನಬಡಿಸಿ, ಮೊಮ್ಮಗನ
ಮಾರ್ಗನಿರೀಕ್ಷಣೆಯು ಮಾಡಹತ್ತಿದನು.

ಅತ್ತಕಡೆಗೆ ಏಕನಾಥನು ಗುರುಗಳ ಅಪ್ಪಣೆಯ
ನ್ನು ತೆಗೆದುಕೊಂಡು ಉತ್ತರಕ್ಕೆ ಹೊರಟನು. ಅ
ವನಿಗೆ ಮೊದಲು ನರ್ಮದಾನದಿಯು ಹತ್ತಿತು. ಆ
ಪವಿತ್ರವಾದ ನದಿಯಲ್ಲಿ ಸ್ನಾನವ ಮಾಡಿ, ಅದರ ಪ್ರ
ಸಿದ್ಧವಾದ ತಡಗಲವನ್ನೂ ದಂಡೆಗಿರುವ ದೊಡ್ಡದೊ
ಡ್ಡ ಸಂಗಮರವರೀ ಬಂಡೆಗಳನ್ನೂ ನೆರೆಯಲ್ಲಿಯ
ಮನೋಹರವಾದ ಗುಡ್ಡಗಳನ್ನೂ ಅವುಗಳಮೇಲಿ
ನ ಅಸಂಖ್ಯಾತ ಶಿಲಾಮೂರ್ತಿಗಳನ್ನೂ ನೋಡಿ ಬೆ
ರಗಾದನು. ಹಿಂದಕ್ಕೆ ಆ ನದಿಯ ತೀರದಲ್ಲಿ ವಾಸಿ
ಸಿದ ಸತ್ಪುರುಷರ ಆಶ್ರಮಗಳ ಕುರುಹುಗಳನ್ನು
ಕಂಡು, ಅವನ ಮನಸಿನಲ್ಲಿ ಒಂದುಬಗೆಯ ಭಕ್ತಿ
ಭಾವವು ಹುಟ್ಟಿತು. ಮುಂದೆ ಅವನು ಚಿತ್ರಕೂಟಕ್ಕೆ
ಹೋದನು. ಅದರಲ್ಲಿ ಪೇಶನಿ ಎಂಬ ನದಿಯು ಹರಿ
ಯುತ್ತದೆ. ಈ ಮನೋಹರವಾದ ಸ್ಥಳದಲ್ಲಿ ಹಿಂದ
ಕ್ಕೆ ರಘುರಾಮನು ಸೀತೆಯನ್ನೂ ಲಕ್ಷ್ಮಣನನ್ನೂ
ಕೂಡಿಕೊಂಡು ವಾಸಿಸಿದನು. ಏಕನಾಥನು ಈ ಸ್ಥ

Digitized by ROJA MUTHIAH RESEARCH LIBRARY

ಳವನ್ನು ನೋಡಿದಕೂಡಲೆ, ಮಲತಾಯಿಯಾದ ಕೈಕೆಯಿಗೆ ತನ್ನ ತಂದೆಯಾದ ದಶರಥರಾಯನು ಕೊಟ್ಟ ವಚನದಿಂದ ಅವನನ್ನು ಮುಕ್ತನನ್ನು ಮಾಡುವದಕ್ಕಾಗಿ, ರಾಮನು ರಾಜವೈಭವಗಳನ್ನು ಬಿಟ್ಟು, ಅರಣ್ಯದೊಳಗಿನ ಗಡ್ಡೆಗೆಣಸುಗಳನ್ನು ತಿಂದು, ೧೪ ವರ್ಷ ವನವಾಸ ತೆಗೆದದ್ದೂ, ರಾಮಚಂದ್ರನ ಧರ್ಮಪತ್ನಿಯಾದ ಸೀತೆಯು ಅರಮನೆಯ ಸೌಖ್ಯಗಳನ್ನು ತೊರೆದು, ಪತಿವ್ರತಾಧರ್ಮದಿಂದ ಗಂಡನ ಕೂಡ ಅರಣ್ಯದೊಳಗೆ ವಿಧವಿಧದಕಷ್ಟಗಳನ್ನು ಅನುಭವಿಸಿದ್ದೂ, ಲಕ್ಷ್ಮಣನು ಸ್ವಂತ ಕಷ್ಟಗಳನ್ನು ತಡಕೊಂಡು, ಅಣ್ಣನಾದ ರಾಮನ ಸೇವೆಯಲ್ಲಿಯೂ ಅತ್ತಿಗೆಯಾದ ಸೀತೆಯ ಸೇವೆಯಲ್ಲಿಯೂ ತತ್ಪರನಾಗಿದ್ದು, ಜೋಡಿಲ್ಲದ ಬಂಧುಪ್ರೀತಿಯನ್ನು ತೋರಿಸಿದ್ದೂ ಏಕನಾಥನ ಮನಸಿನಲ್ಲಿ ಏಕಕಾಲಕ್ಕೆ ಬಂದವು. ಇವಲ್ಲದೆ ಭರತನು ಆ ಕಾಲಕ್ಕೆ ತೋರಿಸಿದ ಬಂಧುಪ್ರೀತಿಯಾದರೂ ಅವನ ಮನಸಿನಲ್ಲಿ ಬರದೆ ಇರಲಿಲ್ಲ. ರಾಮಚಂದ್ರನನ್ನು ವನಕ್ಕೆ ಅಟ್ಟಿ, ಭರತನನ್ನು ಸಿಂಹಾಸನದ ಮೇಲೆ ಕೂಡ್ರಿಸಬೇಕೆಂದು ಅವನ ಹಡದ ತಾಯಿಯಾದ ಕೈಕಯಿಯು ಅಪೇಕ್ಷಿಯಿತ್ತು; ಆದರೆ ಈ ಗುಣವಂತನಾದ ಭರತನು ಸಿಂಹಾಸನವನ್ನೇರಲಿಲ್ಲ. ಅವನು ರಾಮನ ವನವಾಸಕ್ಕೆ ತನ್ನ ತಾಯಿಯೇ ಕಾರಣವಾದಳೆಂದು ತಿಳಿದು,



ಆಕೆಯ ಮೇಲೆ ಕಡುಗೋಪಗೊಂಡು, ಅಯೋಧ್ಯಾಪಟ್ಟಣದಿಂದ ಹೊರಟು, ರಾಮನನ್ನು ಅರಣ್ಯದಲ್ಲಿ ಹುಡುಕುತ್ತಾ ಹುಡುಕುತ್ತಾಹೋಗಿ, ಅವನಿಗೆ ಭೆಟ್ಟಿಯಾದನು. ಆಕಾಲಕ್ಕೆ ರಾಮನು ಚಿತ್ರಕೂಟದಲ್ಲಿದ್ದನು. ಭರತನು ರಾಮನಿಗೆ "ನಿನ್ನಬದಲು ನಾನು ೧೪ ವರ್ಷ ಅರಣ್ಯಕ್ಕೆ ಹೋಗುವೆನು. ದೊಡ್ಡಮನಸಿನವನೂ ನಮ್ಮೆಲ್ಲರನ್ನೂ ಮಕ್ಕಳಂತೆ ಜೋಪಾನಮಾಡುವವನೂ ಸಿಂಹಾಸನಕ್ಕೆ ಯೋಗ್ಯನೂ ಆದ ನೀನು ಅಯೋಧ್ಯೆಗೆ ಹೋಗಿ, ರಾಜ್ಯಸೂತ್ರಗಳನ್ನು ಅಂಗೀಕರಿಸು" ಎಂದು ಬಗೆಬಗೆಯಿಂದ ಬೇಡಿಕೊಂಡರೂ ಪಿತೃಭಕ್ತನಾದ ರಾಮನು ಅದಕ್ಕೆ ಒಡಂಬಡಲಿಲ್ಲ. ಭರತನು ನಿರುಪಾಯನಾಗಿ, ರಾಮನ ಅಪ್ಪಣೆಯನ್ನು ತೆಗೆದುಕೊಂಡು ಅಯೋಧ್ಯೆಗೆ ಹೊರಡುವಾಗ, ತನ್ನೊಂದಿಗೆ ಒಯ್ದಿದ್ದ ಚಿನ್ನದ ಪಾದುಕೆಗಳನ್ನು ರಾಮನ ಮುಂದಿಟ್ಟು ಅವನಿಗೆ "ದಯಮಾಡಿ ಈ ಪಾದುಕೆಗಳ ಮೇಲೆ ನಿನ್ನ ಪಾದಗಳನ್ನಿಟ್ಟರೆ, ನಾನು ಇವುಗಳನ್ನು ತೆಗೆದುಕೊಂಡು ಹೋಗಿ, ಸಿಂಹಾಸನದ ಮೇಲಿಟ್ಟು, ಇವುಗಳ ಸೇವಕನಂತೆ ರಾಜ್ಯಭಾರ ಸಾಗಿಸುವೆನು, ಇಷ್ಟುಮಾತ್ರ ಅನುಗ್ರಹಿಸಬೇಕು" ಎಂದು ಬೇಡಿಕೊಂಡನು. ದಯಾಸಾಗರನಾದ ರಾಮನು ಇದಕ್ಕೆ ಒಡಂಬಟ್ಟು, ಅವುಗಳಮೇಲೆ ತನ್ನ ಪಾದಗಳನ್ನಿಟ್ಟು, ಪ್ರೀತಿಯಿಂ

Digitized by ROJA MUTHIAH RESEARCH LIBRARY

ದ ಅವನನ್ನು ಹರಿಸಿ, ಅಯೋಧ್ಯೆಗೆ ಕಳುಹಿದನು. ಭರತನು ಅಣ್ಣದೇವನಾದ ರಾಮನು ಅರಣ್ಯದಲ್ಲಿ ಕಷ್ಟಬಡುತ್ತಿರುವಾಗ ನಾನು ಅರಮನೆಯಲ್ಲಿ ವಾಸಿಸುವದು ಸರಿಯಲ್ಲೆಂದೆಣಿಸಿ, ಜಟಾಧರನಾಗಿ ಕಂದಮೂಲಾದಿಗಳನ್ನು ಭಕ್ಷಿಸುತ್ತ ರಾಮನು ಅಯೋಧ್ಯೆಗೆ ತಿರುಗಿ ಬರುವವರೆಗೆ ಪರ್ಣಕುಟೀರದಲ್ಲಿ ಏಕಾಂಗಿಯಾಗಿ ಜೀವಿಸಿದನು. ಅಯೋಧ್ಯದ ರಾಜವಂಶಸ್ಥರಲ್ಲಿ ವ್ಯಕ್ತವಾಗುವ ಇಂಥ ಮೇಲಾದ ಸುಗುಣಗಳನ್ನು ಜಗತ್ತಿನ ಇತಿಹಾಸದಲ್ಲಿ ಕಾಣುವದು ಅಪರೂಪ. ಈ ಗುಣಗಳದೆಸೆಯಿಂದ ಅವರು ಹಿಂದು ಜನರಿಂದ ದೇವತಾಮಾನವನ್ನು ಹೊಂದುವದು ಏನೂ ಆಶ್ಚರ್ಯವಲ್ಲೆಂದು ಪಾಶ್ಚಾತ್ಯರು ಸಹ ನೆನಿಸುವರು. ಈ ಸಂಗತಿಗಳು ಏಕನಾಥನಿಗೆ ನೆನಪಾಗಲು, ಪ್ರಪಂಚದಲ್ಲಿದ್ದ ಪುರುಷನಿಂದ ಅನ್ಯರಿಗೆ ಮೇಲಾದ ಬಳಿತುಗಳುಂಟಾಗುತ್ತವೆಂದು ಗುರುಗಳು ಹೇಳಿದ ಉಪದೇಶವು ದಿಟವಾದದ್ದೆಂದು ತಿಳುಕೊಂಡನು. ಮುಂದೆ ಅವನು ಚಿತ್ರಕೂಟದಿಂದ ಹೊರಟು ಪ್ರಯಾಗ (ಅಲ್ಹಾಬಾದ) ಕಾಶೀ (ಬನಾರಸ) ಅಯೋಧ್ಯಾ (ಅವುದ) ಮಥುರಾ, ಬೃಂದಾವನ, ಹರಿದ್ವಾರ ಮುಂತಾದ ಪವಿತ್ರಸ್ಥಳಗಳನ್ನೂ ಹಿಮಾಚಲದೊಳಗಿನ ಕೇದಾರ, ಬದ್ರಿನಾಥ ಮುಂತಾದ ಪುಣ್ಯಕ್ಷೇತ್ರಗಳನ್ನೂ ನೋಡಿಕೊಂಡು ದಕ್ಷಿಣಕ್ಕೆ ತಿರುಗಿದ



ನು. ಅವನು ದ್ವಾರಕಾ, ಜುನಾಘಡ, ಡಾಕೂರ ಮುಂತಾದವುಗಳ ಮೇಲೆ ಹಾಯ್ದು ಪೈಠಣಕ್ಕೆ ಬಂದನು. ಅವನು ಎಲ್ಲಿ ಹೋದರೂ ಊರಹೊರಗಿನ ಯಾವದಾದರೊಂದು ಗುಡಿಯಲ್ಲಿ ಇಲ್ಲವೆ ಧರ್ಮಶಾಲೆಯಲ್ಲಿ ಇಳುಕೊಳ್ಳುವನು. ಅದೇಮೇರೆಗೆ ಅವನು ಇಲ್ಲಿಯಾದರೂ ಊರಲ್ಲಿ ಪ್ರವೇಶಿಸದೆ, ತಾನು ಹಿಂದಕ್ಕೆ ಗಂಭೀರವಾದ ಆಕಾಶವಾಣಿಯನ್ನು ಕೇಳಿದಂಥ ಶಿವಾಲಯದಲ್ಲಿಯೇ ಇಳುಕೊಂಡು, ಮರುದಿವಸ ಭಿಕ್ಷೆಗಾಗಿ ಊರಲ್ಲಿ ಪ್ರವೇಶಿಸಿದನು.

ಚಕ್ರಪಾಣಿಯು ದೇವದರ್ಶನಕ್ಕೆ ಹೋಗಿ ತಿರುಗಿ ಮನೆಗೆ ಬರುವಾಗ, ಕಾಲು ಸೋತದ್ದರಿಂದ ತುಸು ದಣುವಾರಿಸಿಕೊಳ್ಳುವದಕ್ಕಾಗಿ ಒಂದುಮನೆಯ ಮುಂದಿನ ಕಟ್ಟೆಯಮೇಲೆ ಕೂತುಕೊಳ್ಳುವಷ್ಟರಲ್ಲಿಯೇ ಆ ಮನೆಯೊಳಗೆ "ಅಲ್ಲಖ" ಎಂಬ ಗಂಭೀರಧ್ವನಿಯಾದದ್ದು ಅವನ ಕಿವಿಗೆ ಬಿತ್ತು. ಇಷ್ಟು ಉಚ್ಚೈಸ್ವರದ ಹೊಸಗೋಸಾವಿಯು ಯಾವನಿರುವನೋ ಎಂದು ಸಾಶ್ಚರ್ಯಮುದ್ರೆಯಿಂದ ಬಾಗಿಲ ಕಡೆಗೆ ನೋಡಿದನು. ಅಷ್ಟರಲ್ಲಿ ಭಿಕ್ಷೆಯು ತೆಗೆದುಕೊಂಡು ಒಬ್ಬ ತೇಜಃಪುಂಜ ತರುಣಬೈರಾಗಿಯು ಆ ಮನೆಯಿಂದ ಹೊರಬಿದ್ದನು. ಅವನ ಭಸ್ಮಲೇಪಿತಶರೀರವನ್ನೂ ಕಪ್ಪುಕಾಂತಿಯಿಂದ ಶೋಭಿಸುವ ಜಟೆಗಳನ್ನೂ ಭವ್ಯವಾದ ಭಿ

Digitized by ROJA MUTHIAH RESEARCH LIBRARY

ಕಪ್ಪಿಪಾತ್ರೆಯನ್ನೂ ತ್ರಿಶೂಲವನ್ನೂ ಚಕ್ರಪಾಣಿ ಯು ನೋಡಿ, ಇವನೊಬ್ಬ ಮಹಾನ್ ಯೋಗಿಯಾ ಗಿರಬಹುದೆಂದು ಎಣಿಸಿದನು. ಆದರೆ ಅವನನ್ನು ದಿಟ್ಟಿಸಿನೋಡಲು, ಅವನ ಮೋರೆಯು ಹೋಲಿಕೆಯು ಏಕನಾಥನಂತೆ ಇದ್ದದ್ದು ಕಂಡು ಅವನ ಗೊತ್ತು ಹಿಡಿದು ಏಕನಾಥ, ಏಕನಾಥ ಎಂದು ಒದರಿದನು. ಏಕನಾಥನ ಮನಸಿನಲ್ಲಿ ತನ್ನ ಅಜ್ಜಮ್ಮಂದಿರ ಯೋಗಕ್ಷೇಮಗಳನ್ನು ಹೊರಗಿನಿಂದಹೊರಗೇ ತಿಳುಕೊಳ್ಳುವದಿತ್ತು; ಅವರಿಗೆ ಪ್ರತ್ಯಕ್ಷಭೆಟ್ಟಿಯಾಗುವದಿದ್ದಿಲ್ಲ. ಆವನಾದರೂ ಆ ಮನೆಯಿಂದ ಹೊರಗೆ ಬಂದಕೂಡಲೇ ಮುಪ್ಪಿನ ಚಕ್ರಪಾಣಿಯನ್ನು ನೋಡಿ, ಅವನ ಗುರುತುಹಿಡಿದನು; ಆದರೆ ನಾನೇ ಏಕನಾಥನೆಂದು ಹೇಳಿದರೆ ತನ್ನ ಬ್ರಹ್ಮಚರ್ಯವ್ರತಕ್ಕೆ ಭಂಗಬರುವದೆಂದು ಗ್ರಹಿಸಿ ಸುಮ್ಮನಿದ್ದನು. ಅಷ್ಟರಲ್ಲಿ ಚಕ್ರಪಾಣಿಯು ಕರೆದದ್ದನ್ನು ಕೇಳಿ, ಸುಮ್ಮನಿರುವದು ಅವನಿಂದಾಗಲಿಲ್ಲ. ಏಕನಾಥನು ಅಜ್ಜನಿಗೆ ನಮಸ್ಕರಿಸಿ ಹಿಂದೆ ನಡೆದ ೧೩ ವರ್ಷದ ವೃತ್ತಾಂತವನ್ನು ಹೇಳಿದನು. ಅದಕ್ಕೆ ಚಕ್ರಪಾಣಿಯು ತುಂಬಾಸಂತೋಷಬಟ್ಟು, "ಮಗನೇ ನಿನಗೆ ದೇವರು ಕಲ್ಯಾಣಮಾಡಲಿ" ಎಂದು ಹರಿಸಿದನು. ಆಮೇಲೆ ಕಣ್ಣುಗಳಲ್ಲಿ ನೀರುತಂದು "ದಿನಗತಿಸಿದ ನಮ್ಮನ್ನು ಈಮೋರೆಗೆ ಬಿಟ್ಟುಹೋ



ಗುವದು ನಿನ್ನಂಥವಿವೇಕಿಗೆ ತಕ್ಕದ್ದೋ" ಎಂದು ಕೇಳಿದನು. ಅದಕ್ಕೆ ಏಕನಾಥನು ಏನೂ ಉತ್ತರ ಕೊಡದೆ ಬಿಕ್ಕಿಬಿಕ್ಕಿ ಅಳಹತ್ತಿದನು. ದುಃಖದ ಆಬ್ಬರವು ತುಸು ಕಡಿಮೆಯಾದಮೇಲೆ ಅವನು "ನಾನೇ ನಿಮ್ಮ ದುಃಖಕ್ಕೆ ಕಾರಣನಾದೆನು ಉಪಾಯವಿಲ್ಲ. ನನ್ನ ಅಪರಾಧವನ್ನು ದಯಮಾಡಿ ಕ್ಷಮಿಸಬೇಕು" ಎಂದು ಅಜ್ಜನನ್ನು ಬೇಡಿಕೊಂಡನು. ಚಕ್ರಪಾಣಿಯು ಅವನನ್ನು ಕ್ಷಮಿಸಿ "ಇನ್ನುಮೇಲೆ ನಮ್ಮನ್ನುಮಾತ್ರ ಬಿಟ್ಟು ಎಲ್ಲಿಯೂ ಹೋಗಬೇಡ" ಎಂದು ಹೇಳಿದನು. ಅದಕ್ಕೆ ಏಕನಾಥನು ಬಹುನಮ್ರತೆಯಿಂದ ನುಡಿದದ್ದು—ಅಜ್ಜಾ ನನ್ನ ಗುರುಗಳು ಹಿಂದುಸ್ಥಾನದೊಳಗಿನ ಪವಿತ್ರಸ್ಥಳಗಳನ್ನೆಲ್ಲ ನೋಡಿದ ಮೇಲೆ ಮನೆಗೆ ಹೋಗಬೇಕೆಂದು ವಿಧಿಸಿದ್ದಾರೆ. ಆದದ್ದರಿಂದ ನಾನು ಸದ್ಯಕ್ಕೆ ತಮ್ಮ ಇಚ್ಛೆಯಂತೆ ನಡೆಯುವಹಾಗಿಲ್ಲ. ಇದನ್ನು ಕೇಳಿ, ಚಕ್ರಪಾಣಿಯು ತನ್ನ ಬಳಿಯಲ್ಲಿದ್ದ ಜನಾರ್ದನಪಂತರ ಪತ್ರವನ್ನು ತೆಗೆದು ಏಕನಾಥನ ಕೈಯಲ್ಲಿ ಕೊಟ್ಟನು. ಅದರ ಮೇಲೆ ಗುರುಗಳ ಅಕ್ಷರವಿದ್ದದ್ದು ನೋಡಿ ಆತುರದಿಂದ ಅದನ್ನು ಒಡೆದು ಓದಿದನು. ಅದರಲ್ಲಿ ಬರೆದದ್ದೇನೆಂದರೆ:—ನನ್ನ ಪ್ರಿಯಶಿಷ್ಯನೇ ನಿನ್ನ ಮುಪ್ಪಿನ ಅಜ್ಜಮ್ಮಂದಿರನ್ನು ಸಂರಕ್ಷಣೆಮಾಡುವದು ನಿನ್ನ ಮೊದಲನೆಯ ಕರ್ತವ್ಯ

Digitized by ROJA MUTHIAH RESEARCH LIBRARY

ವ್ಯನ್ನ. ಅವರನ್ನು ಆರೈಕೆಮಾಡುವದರಿಂದ ನಿನಗೆ ಬರುವ ಪುಣ್ಯಕ್ಕಿಂತ ಹೆಚ್ಚಿನಪುಣ್ಯವು ತೀರ್ಥಾಟನದಿಂದ ಬರಲಾರದು. ಆದುದರಿಂದ ನೀನು ಈ ಪತ್ರವನ್ನು ನೋಡಿದಮೇಲೆ ಮುಂದಕ್ಕೆ ಹೋಗದೆ ಅಲ್ಲಿಯೇ ನಿಲ್ಲು, ಮತ್ತು ಅವರನ್ನು ನಿನ್ನ ಜೀವಕ್ಕಿಂತ ಹೆಚ್ಚೆಂದೆಣಿಸಿ ಜೋಪಾನಮಾಡು. ಗುರುಗಳ ಈ ಪತ್ರವನ್ನು ನೋಡಿ ಏಕನಾಥನು ಸಂತೋಷದಿಂದ ಪೈಠಣದಲ್ಲಿಯೇ ಉಳಿದನು. ಆದರೆ ಗುರುಗಳ ಪತ್ರದಲ್ಲಿ ‘ ಈ ಪತ್ರವನ್ನು ನೋಡಿದ ಮೇಲೆ ಮುಂದಕ್ಕೆ ಹೋಗದೆ ಅಲ್ಲಿಯೇ ನಿಲ್ಲು ’ ಎಂಬ ಅಕ್ಷರಗಳು ಇದ್ದದರಿಂದ, ಆ ಶಿಷ್ಯಶ್ರೇಷ್ಠನು ಪತ್ರವು ತನ್ನ ಕೈಯಲ್ಲಿ ಬಿದ್ದಾಗ್ಗೆ ನಿಂತಿದ್ದ ಸ್ಥಳದಲ್ಲಿಯೇ ಒಂದು ಮಠವನ್ನು ಕಟ್ಟಿಸಿ, ಅಲ್ಲಿಗೆ ದಿನಾಲು ಹೋಗಿ ಜನರಿಗೆ ನೀತಿಯನ್ನುಪದೇಶಿಸಲಿಕ್ಕೂ ಕಥಾಕೀರ್ತನೆಗಳನ್ನು ಮಾಡಲಿಕ್ಕೂ ಆರಂಭಿಸಿದನು. ಅವನ ಮೇಲಾದ ಉಪದೇಶಗಳನ್ನು ಕೇಳಿ ಜನರು ಅವನಿಗೆ ಮೆಚ್ಚಿದ್ದಲ್ಲದೆ, ಸನ್ಮಾರ್ಗದಿಂದ ನಡೆಯಲಿಕ್ಕೂ ದೇವರ ವಿಷಯವಾಗಿ ವಿಚಾರಮಾಡಲಿಕ್ಕೂ ಹತ್ತಿದರು. ಶ್ರೋತೃಸಮಾಜವು ಬೆಳೆಯಲು ಆ ಮಠವು ಸಾಲದಂತಾಯಿತು. ಇದನ್ನು ನೋಡಿ ಜನರು ತಾವೇ ವರ್ಗಣಿಯಿಂದ ಹಣಕೂಡಿಸಿ, ಅದನ್ನು ವಿಶಾಲವಾಗಿಕಟ್ಟಿಸಿ ಅದಕ್ಕೆ



“ ನಾಥಮಂದಿರ ” ಎಂಬ ಹೆಸರಿಟ್ಟರು. ಏಕನಾಥನು ಒಬ್ಬ ದೊಡ್ಡಹರಿದಾಸನಾಗಿರುತ್ತಾನೆಂಬ ಕೀರ್ತಿಯು ನಾಲ್ಕೂಕಡೆಗೆ ಹಬ್ಬಲು ಸುತ್ತಲಿನ ಜನರು ಅವನ ಬಳಿಗೆ ಬರಹತ್ತಿದರು. ಜನರು ಕೊಟ್ಟ ಕಾಣಿಕೆಗಳಿಂದ ಅವನ ಚರಿತಾರ್ಥವು ಸುರಕ್ಷಿತವಾಗಿ ಸಾಗಹತ್ತಿತು. ಅವನ ಸದ್ಗುಣಗಳನ್ನು ನೋಡಿ ವಿಜಾಪುರದ ಒಬ್ಬ ದೊಡ್ಡಗೃಹಸ್ಥನು ತನ್ನ ಮಗಳಾದ ಗಿರಿಜಾಬಾಯಿಯನ್ನು ಅವನಿಗೆ ಕೊಟ್ಟು ಸಮಾರಂಭದಿಂದ ಲಗ್ನಮಾಡಿದನು.

ಆ ಮೇಲೆ ಏಕನಾಥನು ಸೌಖ್ಯದಿಂದ ಕಾಲಕಳೆಯಹತ್ತಿದನು. ಆದರೆ ಪೃಥ್ವಿಯಲ್ಲಿ ಯಾವ ಮನುಷ್ಯನಾದರೂ ಬಹುಕಾಲದವರೆಗೆ ಸಂತೋಷದಿಂದ ಬದುಕಲಾರನು. ಸುಖದುಃಖಗಳು ಅವನಿಗೆ ಆಗಾಗ್ಗೆ ಬರುವದುಂಟು. ಅದೇಮೇರೆಗೆ ಏಕನಾಥನಿಗೂ ಆಯಿತು. ಅವನ ಅಜ್ಜನೂ ಅಮ್ಮನೂ ಒಬ್ಬರಹಿಂದೊಬ್ಬರು ತೀರಿಕೊಂಡರು. ಇದರಿಂದ ಅವನಿಗೆ ಬಹಳ ದುಃಖವಾಯಿತು. ಆದರೆ ದೇವರ ಕೃತ್ಯಗಳೆಲ್ಲ ಮನುಷ್ಯರ ಸುಖಕ್ಕಾಗಿಯೇ ಇರುತ್ತವೆಂದೆಣಿಸಿ ತನ್ನ ಮನಸಿನ ಸಮಾಧಾನ ಮಾಡಿಕೊಂಡನು. ತುಸುದಿವಸಗಳಲ್ಲಿಯೇ ಅವನ ಗುರುಗಳಾದ ಜನಾರ್ದನಪಂತರು ಫಾಲ್ಗುಣಕೃಷ್ಣಷಷ್ಟಿಯ ದಿವಸ ಸಮಾಧಿಸ್ಥರಾದ ಸುದ್ದಿಯು ದೇವಗಢದಿಂದ ಬಂದು

Digitized by ROJA MUTHIAH RESEARCH LIBRARY

ಮುಟ್ಟಿತು. ಇದನ್ನು ಕೇಳಿ ಏಕನಾಥನು ಗುರುಗಳು ದೇಹಪರಿತ್ಯಾಗಮಾಡಿದ್ದಕ್ಕಾಗಿ ತಿಲಮಾತ್ರವಾದರೂ ದುಃಖವನ್ನು ತೋರಿಸದೆ ಫಾಲ್ಗುಣಕೃಷ್ಣಷಷ್ಟಿಯು ಉತ್ಸವವನ್ನು ಬಹುಸಮಾರಂಭದಿಂದ ಮಾಡಿದನು. ಇದರಿಂದ ಅವನು ಎಷ್ಟುಜ್ಞಾನಿಯಾಗಿದ್ದನೆಂಬದು ಸರಸಾಗಿ ತಿಳಿಯುತ್ತದೆ. ಅವನಿಗೆ ಇಬ್ಬರು ಹೆಣ್ಣು ಮಕ್ಕಳೂ ಒಬ್ಬ ಗಂಡುಮಗನೂ ಇದ್ದರು. ಗಂಡುಮಗನು ಬುದ್ಧಿವಂತನಾಗಿ ಹರಿಪಂಡಿತ ನೆಂಬ ಹೆಸರಿನಿಂದ ಪ್ರಸಿದ್ಧನಾದನು.

ಏಕನಾಥನ ಆಚರಣೆಯು ಹೊಗಳತಕ್ಕಂಥಾದಿತ್ತು. ಅವನು ದಿನಾಲು ಅರುಣೋದಯಕ್ಕೆ ಎದ್ದು ಶೌಚಮುಖಮಾರ್ಜನಾದಿಗಳನ್ನು ತೀರಿಸಿಕೊಂಡು, ನದಿಗೆಹೋಗಿ ಸ್ನಾನಸಂಧ್ಯಾದಿಗಳನ್ನು ನೆರವೇರಿಸಿಕೊಂಡು ತಿರುಗಿ ಮನೆಗೆ ಬಂದು ಪುರಾಣ ಹೇಳುವನು. ತನ್ನಬಳಿಗೆ ಬಂದ ಅತಿಥಿ ಅಭ್ಯಾಗತರನ್ನೂ ಬಡವರನ್ನೂ ಆದರಿಸಿ, ಅವರಿಗೆ ಬೇಕಾದ ಪದಾರ್ಥಗಳನ್ನು ತನ್ನ ಸಾಮರ್ಥ್ಯವಿದ್ದಮೇರೆಗೆ ಕೊಡುವನು. ಮಧ್ಯಾಹ್ನದ ತರುವಾಯ ನಾಥಮಂದಿರಕ್ಕೆ ಹೋಗಿ ಸಾಯಂಕಾಲದವರೆಗೆ ತತ್ವದಮಾತುಗಳನ್ನು ಜನರಿಗೆ ವಿವರಿಸಿಹೇಳುವನು ಸಾಯಂಕಾಲಕ್ಕೆ ಮನೆಗೆಬಂದು ಸಂಧ್ಯಾವಂದನೆಯನ್ನು ತೀರಿಸಿಕೊಂಡು ಮತ್ತೆ ಮಂದಿರಕ್ಕೆ ಹೋಗಿ ಕೀರ್ತನೆಯು



ಮಾಡುವನು. ಈ ಹೊತ್ತಿಗೆ ಅವನು ಶಾಸ್ತ್ರದವಚನಗಳನ್ನು, ವ್ಯವಹಾರದೊಳಗಿನ ಉದಾಹರಣೆಗಳಿಂದ, ಕೇಳುವವರ ಮನಸಿನಲ್ಲಿ ಬಿಂಬಿಸುವಂತೆ ವಿವರಿಸುವನು. ಭಕ್ತಿರಸದಿಂದ ಪೂರಿತವಾದ ಅವನ ವಚನಗಳನ್ನು ಕೇಳಿ ಜನರು ತಲ್ಲೀನರಾಗುವರು. ಅವನ ಪಾಂಡಿತ್ಯ, ವಕ್ತೃತ್ವಶಕ್ತಿ, ಶಾಸ್ತ್ರಜ್ಞಾನ ಇವುಗಳ ಕೀರ್ತಿಯನ್ನು ಕೇಳಿ ದೂರದೂರದ ಜನರು ಸಹ ಅವನನ್ನು ಕಾಣಲಿಕ್ಕೆ ಬರಹತ್ತಿದರು.

ಏಕನಾಥನು ಇಷ್ಟಕ್ಕೇ ತನ್ನ ಕೆಲಸವಾಯಿತೆಂದು ನೆನಿಸಲಿಲ್ಲ. ಅವನು ಬಡವರಿಗೆ ಕೈಲಾದಮಟ್ಟಿಗೆ ಸಹಾಯಮಾಡುವನು. ನಾಥಮಂದಿರದಲ್ಲಿ ಜನರು ಕೊಟ್ಟಕಾಣಿಕೆಯು ಹಣವನ್ನೆಲ್ಲ ತಾನೇ ವೆಚ್ಚಮಾಡಿಕೊಳ್ಳದೆ, ಅದರೊಳಗಿನ ದೊಡ್ಡಭಾಗವನ್ನು ಬಡವರಿಗೆ ಕೊಡುವನು. ಬೇನೆಬಿದ್ದವರ ಬಳಿಗೆಹೋಗಿ ಸಮಾಧಾನಹೇಳುವನು, ಮನೆಗೆ ಬಂದವರನ್ನು ಅನ್ನಪಾನಾದಿಗಳಿಂದ ಉಪಚರಿಸುವನು. ಈ ಕೆಲಸದಲ್ಲಿ ಇವನು ಬಡವನು ಇವನು ಶ್ರೀಮಂತನು ಎಂಬ ಭೇದವನ್ನೆಣಿಸದೆ ಎಲ್ಲರಿಗೂ ಸರಿಯಾಗಿ ಮಾನಕೊಡುವನು. ಅವನು ಜನರಿಗೆ ಬೋಧಿಸಿದ್ದೇನೆಂದರೆ:—ಉಚ್ಚಜಾತಿಯಲ್ಲಿ ಹುಟ್ಟಿದಷ್ಟಕ್ಕೇ ಮನುಷ್ಯನು ವಂದ್ಯನಾಗಲಾರನು. ಒಂದುವೇಳೆ ನಿರ್ದೋಷವಾದ ಆಚರಣೆಗಳುಳ್ಳವ

Digitized by ROJA MUTHIAH RESEARCH LIBRARY

ನು ಕೀಳುಜಾತಿಯಲ್ಲಿ ಹುಟ್ಟಿದ್ದರೂ ಅವನೇ ವಂದ್ಯನು.

ಏಕನಾಥನು ತನ್ನ ಸದ್ವರ್ತನಗಳಿಂದ ಪೈಠಣದೊಳಗಿನ ಜನರ ಪ್ರೀತಿಯನ್ನು ಸಹಜವಾಗಿಯೇ ಪಡೆದನು. ಆದರೆ ಹಲವು ಜನ ದುಷ್ಟರು ಅವನ ಮೇಲೆ ಹೊಟ್ಟೆಕಿಚ್ಚುಮಾಡಿ ಅವನಿಗೆ ಕೇಡುಚಿಂತಿಸಿದರು. ಭಗವದ್ಭಕ್ತರಿಗೆ ಇಂಥ ಕ್ಷುಲ್ಲಕರಿಂದ ಕೇಡು ಸಂಭವಿಸುವದುಂಟೇ? ಅವರು ಏಕನಾಥನ ಪವಿತ್ರವಾದ ಆಚರಣೆಗಳಿಗೂ ಸದುದ್ಯೋಗಗಳಿಗೂ ನಾಚಿ ಅವನೊಡನೆ ಭಕ್ತಿಯಿಂದ ವರ್ತಿಸಹತ್ತಿದರು. ಏಕನಾಥನ ಸಹನಶೀಲತೆಯು ಬಣ್ಣಿಸತಕ್ಕಂಥಾದಿತ್ತು. ಒಂದುದಿವಸ ಅವನು ನದಿಯಲ್ಲಿ ಸ್ನಾನ ಮಾಡಿಕೊಂಡು ತಿರುಗಿ ಬರುತ್ತಿರುವಾಗ ಒಬ್ಬ ತುರುಕನು ಅವನಮೇಲೆ ಉಗುಳಿದನು. ಏಕನಾಥನು ಸುಮ್ಮನೆ ನದಿಗೆ ತಿರುಗಿಹೋಗಿ ಸ್ನಾನ ಮಾಡಿಕೊಂಡು ಮರಳಿಬರುವಾಗ, ಆ ತಿಳಿಗೇಡಿಯು ಪುನಃ ಅವನಮೇಲೆ ಉಗುಳಿದನು. ಏಕನಾಥನು ಏನೂ ಮಾತಾಡದೆ ನದಿಯ ಹಾದಿಯ ಹಿಡಿದನು. ಅವನು ತಿರುಗಿ ಸ್ನಾನ ಮಾಡಿಕೊಂಡು ಬರುವಾಗ ಆ ತುರುಕನು ಮತ್ತೆ ಅವನಮೇಲೆ ಉಗುಳಿದನು. ಆಗ ಏಕನಾಥನು ಪುನಃ ನದಿಗೆ ಹೋದನು. ಇದೇಕ್ರಮವು ಸಾಯಂಕಾಲದವರೆಗೆ ಸಾಗಿತು. ಕಟ್ಟಕಡೆಗೆ ಆ ತು-



ರುಕನೇ ನಾಚಿ "ಇವನು ಅಸಾಧಾರಣ ಪುರುಷನಾಗಿದ್ದಾನೆ. ಇವನನ್ನು ಪೀಡಿಸಿದಪಾಪವು ನನ್ನನ್ನು ಎಂದೂಬಿಡಲಿಕ್ಕಿಲ್ಲ" ಎಂದು ತಿಳಿದು, ಏಕನಾಥನ ಸಮೀಪಕ್ಕೆ ಹೋಗಿ, ಅವನಿಗೆ ಪೊಡಮಟ್ಟು, "ಸಾಧುಗಳೇ ನನ್ನಿಂದಾದ ತಪ್ಪನ್ನು ಕ್ಷಮಿಸಬೇಕು" ಎಂದು ಬೇಡಿಕೊಂಡನು. ಏಕನಾಥನು ಸಂತೋಷದಿಂದ ಅವನ ತಪ್ಪನ್ನು ಕ್ಷಮಿಸಿ ಕಳಿಸಿದನು.

ಏಕನಾಥನು ಚಿಕ್ಕ ಚಿಕ್ಕಮಕ್ಕಳನ್ನು ಪಂಚಪ್ರಾಣ ಮಾಡುವನು. ಅವರನ್ನು ಬೀದಿಗಳಲ್ಲಿ ಕಂಡರೆ ಅಪ್ಪಿಕೊಂಡು ಮುದ್ದಾಡಿ, ಅವರಿಗೆ ಬೆಂಡು ಬತ್ತಾಸುಗಳನ್ನು ಕೊಡಿಸುವನು. ಯಾವನೊಬ್ಬ ಹುಡುಗನು ತಪ್ಪಿಸಿಕೊಂಡು ಮತ್ತೊಂದು ಓಣಿಗೆ ಹೋಗಿದ್ದರೆ, ಅವನನ್ನು ಕರೆದುಕೊಂಡುಬಂದು ಅವನ ಮನೆಗೆ ಕಳಿಸುವನು. ಈ ಕೆಲಸದಲ್ಲಿ ಇವನು ಬ್ರಾಹ್ಮಣನು, ಇವನು ಶೂದ್ರನು ಎಂಬ ಭೇದವನ್ನು ಎಂದೂ ಮಾಡನು.

ಸುಶೀಲರಾದ ಬ್ರಾಹ್ಮಣರಿಗೆ ಕೊಡತಕ್ಕ ಮಾನವನ್ನು ದುರಾಚಾರಿಗಳಾದ ಬ್ರಾಹ್ಮಣರಿಗೆ ಅವನು ಎಂದೂ ಕೊಡಲಿಲ್ಲ, ಇಲ್ಲವೆ ಅವರಿಗೆ ಕುಂದನ್ನಾದರೂ ಇಡಲಿಲ್ಲ. ಅವನ ಪ್ರಯತ್ನವು ಅವರನ್ನು ಯಾವಾಗಲು ಸನ್ಮಾರ್ಗಕ್ಕೆ ತರುವದೇ ಇರುತ್ತಿತ್ತು. ಅವನು ನಾಥಮಂದಿರಕ್ಕೆ ಬಂದವರಿಗಷ್ಟೇ ಧರ್ಮ-

Digitized by ROJA MUTHIAH RESEARCH LIBRARY

ವನ್ನು ಬೋಧಿಸಿ ಸುಮ್ಮನಿರಲಿಲ್ಲ. ಅವನು ಮನೆಮನೆ
ಗೆ ಹೋಗಿ, ಸದುಪದೇಶಗಳನ್ನು ಮಾಡುವನು; ಸತ್ಯ
ದ ಬೆಲೆಯನ್ನು ತಿಳಿಸಿ ಹೇಳುವನು; ಸರ್ವಶಕ್ತನಾ
ದ ದೇವರ ಅನುಗ್ರಹವನ್ನು ಪಡೆಯಲಿಕ್ಕೂ ಒಬ್ಬ
ರಿಗೊಬ್ಬರು ಬಂಧುಪ್ರೀತಿಯಿಂದ ನಡೆಯಲಿಕ್ಕೂ
ತನ್ನಂತೆ ಪರರನ್ನು ಎಣಿಸಲಿಕ್ಕೂ ಉಪದೇಶಮಾಡಿ,
ಅವರನ್ನು ಸುಮಾರ್ಗಕ್ಕೆ ಹಚ್ಚುವನು. ತನಗೆ ಕೇ
ಡು ಬಗೆದಂಥವರಿಗೆ ಒಳಿತು ಮಾಡಿ ಅವರನ್ನು ಹಾ
ದಿಗೆ ತರುವನು. ಒಂದುದಿವಸ ರಾತ್ರಿ ಅವನಿಗೆ ನಿ
ದ್ರೆಹತ್ತಿದಾಗ ಒಬ್ಬಕಳ್ಳನು ಅವನ ಮನೆಗೆ ಕನ್ನವ
ನ್ನಿಕ್ಕಿ ಒಳಗೆ ಬಂದನು. ಅಷ್ಟರಲ್ಲಿ ಏಕನಾಥನು
ಎಚ್ಚತ್ತರೂ ಸುಮ್ಮನೆ ಹಾಸಿಕೆಯಮೇಲೆ ಮಲಗಿ
ಕೊಂಡನು. ಆ ಕಳ್ಳನು ತನಗೆ ಸಿಕ್ಕ ಒಡವೆಗಳ
ನ್ನೆಲ್ಲ ತೆಗೆದುಕೊಂಡು ಮನೆಯಿಂದ ಹೊರಬಿದ್ದ
ನು. ಇದನ್ನು ನೋಡಿ ಏಕನಾಥನು, ಆ ಕಳ್ಳನಿಗೆ
"ಎಲೈ ಗೆಳೆಯನೇ, ನಿನಗೆ ಈಗ ಸಿಕ್ಕಿರುವ ಪದಾ
ರ್ಥಗಳಿಗಿಂತ ಆ ಮೂಲೆಯೊಳಗಿನ ಸಂದುಕದಲ್ಲಿ
ಬೆಲೆಯುಳ್ಳ ಒಡವೆಗಳಿವೆ. ಅವನ್ನೆಲ್ಲ ತೆಗೆದುಕೊಂ
ಡು ಹೋಗು. ನಿನಗೆ ಬಹಳ ಪ್ರಯೋಜನವಾಗುವ
ದು" ಎಂದು ಹೇಳಿದನು. ಆ ಕಳ್ಳನು ಏಕನಾಥನ
ನುಡಿಗಳನ್ನು ಕೇಳಿ, ನಾಚಿಕೊಂಡು, ಅವನ ಬಳಿ
ಗೆ ಬಂದು, "ನಾನು ಬಹಳ ಪಾಪಿಷ್ಟನು, ನನ್ನ



ನ್ನು ಕ್ಷಮಿಸಿ ಉದ್ಧಾರ ಮಾಡಬೇಕು" ಎಂದು ಬೇ
ಡಿಕೊಂಡನು. ಅದಕ್ಕೆ ಏಕನಾಥನು "ಮಿತ್ರಾ, ನೀ
ನು ಕೃತಾಪರಾಧಗಳಿಗಾಗಿ ಪಶ್ಚಾತ್ತಾಪಬಟ್ಟು, ಮುಂ
ದೆ ಸನ್ಮಾರ್ಗದಿಂದ ನಡೆದರೆ ದೇವರು ನಿನ್ನನ್ನು ಕ್ಷ
ಮಿಸುವನು" ಎಂದು ಹೇಳಿದನು. ಆಮೇಲೆ ಆ ಕಳ್ಳ
ನು ಒಳ್ಳೇಮಾರ್ಗದಿಂದ ನಡೆಯಹತ್ತಿದನು.

ಸನ್ಯಾಸಿಯು ತನ್ನ ಕೊರಳಲ್ಲಿ ರುದ್ರಾಕ್ಷಿಯ
ಮಾಲೆಯನ್ನು ಹಾಕಿಕೊಳ್ಳುವದೂ, ಜಟಾಧಾರಿಯಾ
ಗಿರುವದೂ, ಶರೀರಕ್ಕೆ ಭಸ್ಮವನ್ನು ಧರಿಸಿಕೊಳ್ಳು
ವದೂ ಹೆಚ್ಚಿನದಲ್ಲ; ಆದರೆ ಅವನು ಪರಿಶುದ್ಧವಾ
ದ ಆತ್ಮವುಳ್ಳವನೂ ಬ್ರಹ್ಮನನ್ನು ತಿಳಿದವನೂ ಪರ
ಸ್ತ್ರೀಪರವಿತ್ತಗಳನ್ನು ಕಣ್ಣೆತ್ತಿ ಸಹ ನೋಡದವ
ನೂ ಅನ್ಯರ ಮನಸಿಗೆ ಹತ್ತುವಂಥ ಮಾತುಗಳನ್ನಾ
ಡದವನೂ ಸಿಟ್ಟನ್ನು ನೀಗಿದವನೂ ನುಡಿಯಂತೆ ನ
ಡೆಯುಳ್ಳವನೂ ಆಗಿರುವದೇ ಹೆಚ್ಚಿನದೆಂದು ಏಕನಾ
ಥನ ಅಭಿಪ್ರಾಯವಿತ್ತು. ಅವನು ನಾಥಮಂದಿರಲ್ಲಿ
ಮಾಡಿದ ಉಪದೇಶಗಳಲ್ಲಿ ಕೆಲವನ್ನು ಉದಾಹರಣೆ
ಗಾಗಿ ಕೆಳಗೆ ಬರೆಯುತ್ತೇವೆ—

೧. ದೇವರ ಪ್ರಾರ್ಥನೆಯನ್ನು ಮನಃಪೂರ್ವಕ
ವಾಗಿ ಮಾಡಿರಿ. ಸುಮ್ಮನೇ ದೇವರ ಹೆಸರನ್ನು ತೆಗೆ
ದುಕೊಳ್ಳುವದರಿಂದ ಏನೂ ಪ್ರಯೋಜನವಿಲ್ಲ. ನೀ
ವು ದೇವರ ಧ್ಯಾನಮಾಡಿ ಮತ್ತೆ ಪಾಪದ ಕೆಲಸಗಳ

Digitized by ROJA MUTHIAH RESEARCH LIBRARY

ನ್ನು ಮಾಡಹತ್ತಿದರೆ, ನೀವು ಅವನಿಗೆ ಕೃತಘ್ನತೆಯನ್ನು ತೋರಿಸಿದ ಹಾಗಾಗುವದು.

೨. ನಿಮ್ಮ ಮನಸಿನೊಳಗಿನ ದುಷ್ಟ ಆಲೋಚನೆಗಳನ್ನೆಲ್ಲ ಬಿಸಾಡಿರಿ. ಮನಸಿನಲ್ಲಿ ಯಾವಾಗಲು ಪರಮಾತ್ಮನ ಧ್ಯಾನಮಾಡುತ್ತಿರಿ.

೩. ನೀವು ನಿಮ್ಮ ಕುಟುಂಬದವರನ್ನು ಸಂರಕ್ಷಣೆ ಮಾಡುವದು ನಿಮ್ಮ ಮೊದಲನೆಯ ಕರ್ತವ್ಯವು. ಅವರನ್ನು ದುರ್ಲಕ್ಷಿಸಿ ಪರೋಪಕಾರ ಮಾಡುವ ಹವ್ಯಾಸಕ್ಕೆ ಬಿದ್ದರೆ, ನೀವು ದೊಡ್ಡ ಪಾಪಕ್ಕೆ ಗುರಿಯಾಗುವಿರಿ.

೪. ಅನ್ಯರಿಗೆ ಸಹಾಯ ಮಾಡುವದು ನಿಮ್ಮ ಕರ್ತವ್ಯವೆಂದು ತಿಳುಕೊಳ್ಳಿರಿ. ನೀವು ಮಾಡಿದ ಉಪಕಾರಕ್ಕೆ ಪ್ರತಿಯಾಗಿ ಏನೂ ಬಯಸಬೇಡಿರಿ.

೫. ಗೃಹಸ್ಥಾಶ್ರಮಿಗಳಾಗಿರಿ; ಆದರೆ ಸಂಸಾರದಲ್ಲಿ ತೀರ ಲಂಪಟರಾಗಿರಬೇಡಿರಿ.

ಏಕನಾಥನ ಸಂಬಂಧವಾಗಿ ಎಷ್ಟೋ ಆಶ್ಚರ್ಯಕರವಾದ ಸಂಗತಿಗಳು ವಿವರಿಸಲ್ಪಟ್ಟಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಹೇಳುತ್ತೇವೆ:—

ಏಕನಾಥನು ತನ್ನ ತಂದೆಯ ಶ್ರಾದ್ಧದದಿವಸ ಸಾಂಪ್ರದಾಯದಂತೆ ಬ್ರಾಹ್ಮಣರಿಗೆ ಔತನವ ಹೇಳಿ, ಮನೆಯಲ್ಲಿ ವಿಧವಿಧದ ಮೃಷ್ಟಾನ್ನಗಳನ್ನು ಮಾಡಿಸಿದನು. ಅವುಗಳ ಸುವಾಸನೆಯು ಮನೆಯ ಸುತ್ತಲೂ ಹಬ್ಬಿ



ಡು. ಈ ಕಾಲಕ್ಕೆ ಏಕನಾಥನ ಮನೆಯ ಮುಂದೆ ಹಾದುಹೋಗುತ್ತಿದ್ದ ಕೆಲವು ಕೀಳುಜಾತಿಯ ಜನರಿಗೆ ಈ ಪಕ್ವಾನ್ನಗಳ ವಾಸನೆಯು ಬಡಿದ ಕೂಡಲೆ ಅವರ ಬಾಯಿಯಲ್ಲಿ ನೀರು ಒಡೆದು, ತಮ್ಮತಮ್ಮೊಳಗೆ ಮಾತಾಡಿದ್ದೇನೆಂದರೆ:—ಈ ಮನೆಯಲ್ಲಿ ಸವಿಸವಿ ಅಡಿಗೆಯಾದಂತೆ ತೋರುತ್ತದೆ. ದೇವರ ದಯದಿಂದ ಈ ಊಟವು ನಮಗೆ ದೊರೆದರೆ ಬಹಳ ಒಳ್ಳೆಯದಾಗುವದು. ಈ ನುಡಿಯನ್ನು ಏಕನಾಥನು ಕೇಳಿ, ಅವರೆಲ್ಲರನ್ನು ಮನೆಯಲ್ಲಿ ಕರೆದು ಅವರಿಗೆ ಹೊಟ್ಟೆತುಂಬ ಉಣಿಸಿ ಕಳುಹಿದನು. ಬ್ರಾಹ್ಮಣರದೆಸೆಯಿಂದ ಹೊಸಅಡಿಗೆಯನ್ನು ಸಿದ್ಧಮಾಡಿಸಿ ಅವರನ್ನು ಕರೆಯಲಿಕ್ಕೆ ಹೋದನು. ಇದಕ್ಕೂ ಪೂರ್ವದಲ್ಲಿಯೇ ಅವನು ಶೂದ್ರರಿಗೆ ಭೋಜನ ಮಾಡಿಸಿದ ಸುದ್ದಿಯು ಅವರಿಗೆ ಹತ್ತಿತ್ತು. ಆದದ್ದರಿಂದ ಅವರು ಏಕನಾಥನಮೇಲೆ ಸಿಟ್ಟಾಗಿ "ನೀನು ತೀರ ಜಾತಿಭ್ರಷ್ಟನಾಗಿರುತ್ತೀ. ನಿನ್ನ ಅನ್ನವನ್ನು ನಾವು ಎಂದೂ ಮುಟ್ಟಲಿಕ್ಕಿಲ್ಲ" ಎಂದು ಖಂಡಿತವಾಗಿ ಹೇಳಿದರು. ಇದನ್ನು ಕೇಳಿ ಏಕನಾಥನು ಖಿನ್ನನಾಗಿ ಮನೆಗೆ ಬಂದು ಚಿಂತಿಸುತ್ತ ಕುಳಿತನು. ತುಸುಹೊತ್ತಿನಲ್ಲಿಯೇ ಕೆಲವುಜನ ಬ್ರಾಹ್ಮಣರು ಮಡಿಗಳನ್ನುಟ್ಟು, ಭವ್ಯವಾದ ನಾಮಮುದ್ರೆಗಳನ್ನು ಧರಿಸಿ, ಕೈಯಲ್ಲಿ ತಂಬಿಗೆಥಾಲಿಗಳನ್ನು

Digitized by ROJA MUTHIAH RESEARCH LIBRARY

ಹಿಡಿದುಕೊಂಡು, ತನ್ನ ಮನೆಯ ಕಡೆಗೆ ಬರುವದನ್ನು ಕಂಡನು. ಅವರು ನೆಟ್ಟಗೆ ತನ್ನ ಮನೆಗೆ ಬರಲು ಏಕನಾಥನು ತುಂಬಾ ಸಂತೋಷಬಟ್ಟು ಅವರನ್ನು ಸನ್ಮಾನಪೂರ್ವಕವಾಗಿ ಆದರಿಸಿದನು. ಶ್ರಾದ್ಧಸಂಕಲ್ಪಾದಿ ವಿಧಿಗಳು ತೀರಿದ ಬಳಿಕ ಯಥೇಚ್ಛ ಭೋಜನಮಾಡಿಸಿ, ತಾಂಬೂಲದಕ್ಷಿಣೆಗಳಿಂದ ಅವರನ್ನು ಸತ್ಕರಿಸಿದನು. ಬಳಿಕ ಅವರು ಅವನಿಗೆ ಆಶೀರ್ವದಿಸಿ ಒಬ್ಬೊಬ್ಬರೇ ಮನೆಯಿಂದ ಹೊರಬಿದ್ದರು. ಮೊದಲು ಔತನವನ್ನು ಹಿಡಿದ ಬ್ರಾಹ್ಮಣರು ಇದನ್ನು ಕೇಳಿ, ಸಿಟ್ಟಾಗಿ ಭರದಿಂದ ಅವರ ಸಮೀಪಕ್ಕೆ ಬಂದು ಅವರ ಮೋರೆಗಳನ್ನು ನೋಡಿ ಬೆರಗಾದರು. ಯಾಕೆಂದರೆ ತಮ್ಮೊಳಗಿನ ಕೆಲವರ ಮೃತಪಟ್ಟ ಅಜ್ಜಂದಿರೂ ಕೆಲವರ ತಂದೆಗಳೂ ಕೆಲವರ ಸಹೋದರರರೂ ಅವರಲ್ಲಿದ್ದರು!! ಈ ಕೌತುಕವನ್ನು ನೋಡಿ ಆ ಬ್ರಾಹ್ಮಣರು "ಏಕನಾಥನು ಸಾಮಾನ್ಯಮನುಷ್ಯನಲ್ಲ, ದಿಟವಾಗಿ ಅಮಾನುಷ ಪುರುಷನಾಗಿರುತ್ತಾನೆ" ಎಂದು ತಿಳಿಕೊಂಡು ಏಕನಾಥನ ಬಳಿಗೆ ಬಂದು, ತಮ್ಮ ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿಕೊಂಡರು. ಏಕನಾಥನು ಅವರನ್ನು ಅಂತಃಕರಣಪೂರ್ವಕವಾಗಿ ಕ್ಷಮಿಸಿ ಕಳುಹಿದನು.

ಪೈಠಣದಲ್ಲಿ ರಾಮನೆಂಬೊಬ್ಬ ಶೂದ್ರನಿದ್ದನು.

Digitized by ROJA MUTHIAH RESEARCH LIBRARY



ಅವನೂ ಅವನ ಹೆಂಡತಿಯೂ ಸುಶೀಲರಾಗಿದ್ದರು. ಅವರು ದಿನಾಲು ಏಕನಾಥನ ಪುರಾಣ ಕೇಳಲಿಕ್ಕೆ ಭಕ್ತಿಯಿಂದ ಬರುತ್ತಿದ್ದರು. "ಮನುಷ್ಯನು ನೀಚಜಾತಿಯಲ್ಲಿ ಹುಟ್ಟಿದ್ದರೂ ನೀತಿಯಿಂದ ನಡೆದರೆ ಸತ್ಪುರುಷನೆಂದೆನಿಸಿಕೊಳ್ಳುವನು, ಅವನು ಎಲ್ಲಬಗೆಯ ಮಾನಕ್ಕೆ ಪಾತ್ರನು" ಎಂದು ಏಕನಾಥನು ಜನರಿಗೆ ಆಗಾಗ್ಗೆ ಉಪದೇಶಮಾಡುತ್ತಿರುವದನ್ನು ಕೇಳಿ, ರಾಮನ ಮನಸಿನಲ್ಲಿ, ಏಕನಾಥನಿಗೆ ಔತನ ಹೇಳಿ, ತನ್ನ ಮನೆಗೆ ಕರಕೊಂಡು ಹೋಗಬೇಕೆಂಬ ಅಪೇಕ್ಷೆ ಹುಟ್ಟಿತು. ಅದೇಮೋರಿಗೆ ಅವನು ಒಂದುದಿವಸ ತನ್ನ ಮನೆಯಲ್ಲಿ ಪಕ್ವಾನ್ನಗಳನ್ನು ಸಿದ್ಧಪಡಿಸಿ ಅವನಿಗೆ ಊಟಕ್ಕೆ ಹೇಳಿದನು. ಏಕನಾಥನು ಸಂತೋಷದಿಂದ ಔತನವ ಹಿಡಿದು ರಾಮನ ಮನೆಗೆ ಹೋದನು ಈ ಸುದ್ದಿಯು ನೆರೆಹೊರೆಯ ಬ್ರಾಹ್ಮಣರಿಗೆ ತಿಳಿದಕೂಡಲೆ ಅವರು ರಾಮನ ಮನೆಗೆ ಹೋಗಿ ನೋಡುತ್ತಾರೆ— ಅಲ್ಲಿ ಏಕನಾಥನು ಊಟಕ್ಕೆ ಕೂತಿದ್ದಾನೆ. ರಾಮನೂ ಅವನಹೆಂಡತಿಯೂ ಓಡಿಯಾಡಿ ಅವನಿಗೆ ಊಟಕ್ಕೆ ಬಡಿಸುತ್ತಾರೆ. ಇದನ್ನು ನೋಡಿ, ಅವರು ಹಾಗೆಯೇ ಹಿಂದಿರುಗಿ ದಾರಿಯಲ್ಲಿ ಕಂಡಕಂಡ ಬ್ರಾಹ್ಮಣರಿಗೆ "ಏಕನಾಥನು ಶೂದ್ರನಾದ ರಾಮನ ಮನೆಯಲ್ಲಿ ಊಟಕ್ಕೆ ಕೂತಿದ್ದಾನೆ" ಎಂದು ಹೇಳುತ್ತ

ಹೋದರು. ಇದನ್ನು ಕೇಳಿದವರೆಲ್ಲರೂ ಸೋಜಿಗಗೊಂಡರು. ಅವರಲ್ಲೊಬ್ಬನು " ನಾನು ಈಗ ಏಕನಾಥನ ಮನೆಯಿಂದ ಬಂದೆನು. ಅವನು ತನ್ನ ಮನೆಯಲ್ಲಿಯೇ ಇದ್ದಾನೆ, ನೀವು ಹೇಳುವದನ್ನು ನಾನು ನಂಬಲಾರೆನು " ಎಂದು ನುಡಿದನು. ಈ ಮಾತನ್ನು ಪರೀಕ್ಷಿಸುವದಕ್ಕಾಗಿ ಅವರೆಲ್ಲರೂ ಏಕನಾಥನ ಮನೆಗೆ ಹೋದರು. ಅಲ್ಲಿ ಅವನು ಜನರೊಂದಿಗೆ ಮಾತಾಡುತ್ತ ಕುಳಿತುಕೊಂಡಿದ್ದನು. ಅಲ್ಲಿಂದ ಅವರು ನೆಟ್ಟಗೆ ರಾಮನ ಮನೆಗೆಹೋದರು. ಅಲ್ಲಿ ಅವನು ಅದೇ ಊಟ ತೀರಿಸಿಕೊಂಡು ತಾಂಬೂಲ ಹಾಕಿಕೊಳ್ಳುತ್ತ ಕೂತಿದ್ದನು. ಅವನನ್ನು ನೋಡಿ ಆಶ್ಚರ್ಯಬಟ್ಟು ಅವನೊಂದಿಗೆ ಮಾತಾಡಬೇಕೆಂಬುವಷ್ಟರಲ್ಲಿಯೇ ಅವನು ಮಾಯವಾದನು. ಈ ಅಮಾನುಷಕೃತ್ಯಕ್ಕೆ ಬೆರಗಾಗಿ, ಅವರು ಸುಮ್ಮನೆ ತಂತಮ್ಮ ಮನೆಗಳಿಗೆ ಹೊರಟುಹೋದರು.

ಏಕನಾಥನ ಕಥಾಕೀರ್ತನೆಗಳನ್ನು ಕೇಳಲಿಕ್ಕೆ ಒಬ್ಬ ಸ್ತ್ರೀಯು ನಾಥಮಂದಿರಕ್ಕೆ ಬರುತ್ತಿದ್ದಳು. ಅವಳ ಸದ್ವರ್ತನೆಯನ್ನೂ ಭಕ್ತಿಯನ್ನೂ ನೋಡಿ ಗುಡಿಯಲ್ಲಿ ಕೂಡಿದ ಜನರು ಅವಳೊಬ್ಬ ಸಾಧು ಸ್ತ್ರೀಯೆಂದು ಎಣಿಸುತ್ತಿದ್ದರು. ಅವರೊಳಗಿನ ಈರ್ವರು ನೀಚರು ಅವಳ ರೂಪಲಾವಣ್ಯಕ್ಕೆ ಮೋಹಿಸಿ, ಒಂದು ದಿವಸ ಕೀರ್ತನೆಯು ಮುಗಿದ



ಮೇಲೆ ಅವಳು ಗುಡಿಯನ್ನು ಬಿಟ್ಟು ಹೊರಟ ಕೂಡಲೆ ಅವಳನ್ನು ಹಿಂಬಾಲಿಸಿದರು. ಆ ಸ್ತ್ರೀಯು ಗೋದಾವರಿಯ ಮಾರ್ಗವಿಡಿದು ಸಾಗಿದಳು. ನದಿಯ ಪ್ರವಾಹವು ಬಂದರೂ ನಿಲ್ಲದೆ ನೀರೊಳಗೇ ನಡೆದಳು. ಅವಳನ್ನು ಹಿಂಬಾಲಿಸಿದ ಈರ್ವರು, ಇವಳು ನೀರೊಳಗೆ ಮುಳುಗಿ ಸಾಯುವಳೆಂದು ಗ್ರಹಿಸಿ, ಅವಳನ್ನು ಹಿಡಿಯುಹೋದರು. ಆಗ ಅವಳು ಅವರನ್ನು ಸಿಟ್ಟಿನಿಂದ ನೋಡಿ ಅದೃಶ್ಯವಾದಳು !! ಈ ಸುದ್ದಿಯು ಸುತ್ತಲೂ ಹಬ್ಬಿತು. ಏಕನಾಥನು ಇದನ್ನು ಕೇಳಿ, ಮರುದಿವಸ ಕೀರ್ತನೆಗೆ ಆರಂಭಿಸುವ ಮೊದಲು ಈ ಸಂಗತಿಯನ್ನು ಕುರಿತು ಜನರಿಗೆ ಹೇಳಿದ್ದೇನೆಂದರೆ:—ಆ ಸ್ತ್ರೀಯು ಸಾಮಾನ್ಯಳಲ್ಲ. ಅವಳು ಗಂಗಾದೇವಿಯು. ಅವಳು ಕೀರ್ತನೆಯನ್ನು ಕೇಳುವದಕ್ಕೆ ನಾಥಮಂದಿಕ್ಕೆ ಬರುತ್ತಿದ್ದಳು. ಅವನು ಮತ್ತೆ ಹೇಳಿದ್ದೇನೆಂದರೆ:—ದೇವರನ್ನು ಒಲಿಸಿಕೊಳ್ಳ ಬಯಸುವವನು ಸುಸ್ವಭಾವದವನಾಗಿರಬೇಕು. ದುಷ್ಟ ಸ್ವಭಾವದವನ ಮೇಲೆ ದೇವರ ಕೃಪೆಯು ಎಂದಿಗೂ ಉಂಟಾಗಲಾರದು. ಹೊರಗಿನ ಡಂಭಾಚಾರಗಳು ನಿಷ್ಪ್ರಯೋಜನವಾದವುಗಳು. ಮನುಷ್ಯನ ಮನಸು ಒಳಗೂ ಹೊರಗೂ ಶುದ್ಧವಾಗಿರಲಿಕ್ಕೆ ಬೇಕು.

ಪೈಠಣದೊಳಗಿನ ಒಬ್ಬ ಬ್ರಾಹ್ಮಣನು ಒಂದು ಸ್ವ

Digitized by ROJA MUTHIAH RESEARCH LIBRARY

ರಶ ಮಣಿಯನ್ನು ಏಕನಾಥನ ವಶಕ್ಕೆ ಕೊಟ್ಟು ಬೇ
ರೆ ಊರಿಗೆ ಹೋದನು. ಏಕನಾಥನು ತನ್ನ ಮನೆಗಿಂತ
ನಾಥಮಂದಿರವು ಹೆಚ್ಚು ಭದ್ರವಾದ ಸ್ಥಳವೆಂದೆಣಿಸಿ,
ಅದನ್ನು ಮಂದಿರದಲ್ಲಿಟ್ಟನು. ಆದರೆ ಸೇವಕ
ಜನರು ಅದನ್ನು ನೋಡದೆ ನಿರ್ಮಾಲ್ಯ ಹೂವುಗ
ಳೊಂದಿಗೆ ಒಯ್ದು, ನದಿಯಲ್ಲಿ ಚೆಲ್ಲಿಬಿಟ್ಟರು. ಕೆ
ಲವು ದಿವಸಗಳ ತರುವಾಯ ಆ ಬ್ರಾಹ್ಮಣನು ಊ
ರಿಂದ ತಿರುಗಿ ಬಂದು ಏಕನಾಥನಿಗೆ ಆ ಮಣಿಯ
ನ್ನು ಕೇಳಿದನು. ಏಕನಾಥನು ಅದನ್ನು ಗುಡಿ
ಯಲ್ಲಿ ಎಷ್ಟು ಹುಡುಕಿದರೂ ಅದು ದೊರೆಯ
ಲಿಲ್ಲ. ಆಮೇಲೆ ಏಕನಾಥನು ನಡೆದ ಸಂಗತಿಯನ್ನು
ಆ ಬ್ರಾಹ್ಮಣನಿಗೆ ತಿಳಿಸಿದನು. ಅದಕ್ಕೆ ಆ ಬ್ರಾ
ಹ್ಮಣನು ಸಿಟ್ಟಾಗಿ ಏಕನಾಥನಿಗೆ ಬಾಯಿಗೆ ಬಂ
ದಂತೆ ಬೈದನು. ಆದರೆ ಏಕನಾಥನು ಸುಮ್ಮನೆ ಬೈ
ಸಿಕೊಂಡು, ಬ್ರಾಹ್ಮಣನ ಸಿಟ್ಟು ತುಸು ಕಡಿಮೆ
ಯಾದಮೇಲೆ ಅವನನ್ನು ನದಿಗೆ ಕರಕೊಂಡು
ಹೋಗಿ, ನದಿಯ ಪಾತ್ರದೊಳಗಿನ ಕೆಲವು ಕಲ್ಲು
ಗಳನ್ನು ಬೊಗಸೆಯಲ್ಲಿ ತೆಗೆದುಕೊಂಡು, ನಿನ್ನ
ಮಣಿಯನ್ನು ಗೊತ್ತು ಹಿಡಿದು ತೆಗೆದುಕೋ ಎಂ
ದು ಹೇಳಿದನು. ಈ ನುಡಿಗೆ ಆ ಬ್ರಾಹ್ಮಣನು ಇವ
ನು ಉಪಹಾಸ ಮಾಡುತ್ತಾನೆಂದು ಗ್ರಹಿಸಿ, ತ
ನ್ನೊಂದಿಗೆ ತಂದ ಕಬ್ಬಿಣದ ತುಂಡನ್ನು ಅವಕ್ಕೆ

Digitized by ROJA MUTHIAH RESEARCH LIBRARY



ಮುಟ್ಟಿಸಿ ಮುಟ್ಟಿಸಿ ನೋಡಲು, ಏಕನಾಥನ ಬೊ
ಗಸೆಯೊಳಗಿನ ಕಲ್ಲುಗಳೆಲ್ಲ ಸ್ಪರಶಮಣಿಗಳೇ ಇ
ದ್ದವು! ಆಮೇಲೆ ಬ್ರಾಹ್ಮಣನು ತನ್ನದನ್ನು ಗೊ
ತ್ತುಹಿಡಿದು ತೆಗೆದುಕೊಂಡು ಏಕನಾಥನ ಸತ್ವಕ್ಕೆ
ಆಶ್ಚರ್ಯಬಟ್ಟನು. ಆಮೇಲೆ ಏಕನಾಥನು ಉಳಿ
ದ ಮಣಿಗಳನ್ನು ನದಿಯಲ್ಲಿ ಚೆಲ್ಲಿಬಿಟ್ಟಕೂಡಲೆ
ಅವು ಮೊದಲಿನಂತೆ ಪಾಷಾಣಗಳಾದವು.

ಈಗ ನಾವು ಏಕನಾಥನ ಗ್ರಂಥಗಳವಿಷಯವಾ
ಗಿ ತುಸು ಬರೆಯುವೆವು. ಅವನು ಹೆಸರಾದ ಕವಿ
ಯಾಗಿದ್ದನು. ಶಾರದೆಯ ಕೃಪೆಯು ಅವನ ಮೇಲೆ
ಪೂರ್ಣವಾಗಿದ್ದದರಿಂದ, ಅವನ ಬಾಯಿಯಿಂದ ಹೊಸ
ಹೊಸ ಅಭಂಗಗಳೂ ಶ್ಲೋಕಗಳೂ ಸಹಜವಾಗಿ
ಯೇ ಹೊರಡುತ್ತಿದ್ದವು. ಅವನು ಹಲವು ಗ್ರಂಥಗ
ಳನ್ನು ಬರೆದನು. ಸಂಸ್ಕೃತಭಾಷೆಯಲ್ಲಿದ್ದ ಭಾಗ
ವತವು ಜನರಿಗೆ ಸುಲಭವಾಗಿ ತಿಳಿಯಬೇಕೆಂಬ ಉ
ದ್ದೇಶದಿಂದ ಅದನ್ನು ಮಹಾರಾಷ್ಟ್ರಭಾಷೆಯಲ್ಲಿ ಭಾ
ಷಾಂತರಿಸಿ, ಅದಕ್ಕೆ ಎಷ್ಟೋ ಟಿಪ್ಪಣಿಗಳನ್ನು ಜೋ
ಡಿಸಿದನು. ಅದರ ಎರಡು ಅಧ್ಯಾಯಗಳು ಮುಗಿದ
ಮೇಲೆ ಒಬ್ಬ ಬ್ರಾಹ್ಮಣನು ಅದರದೊಂದು ಪ್ರತಿಯ
ನ್ನು ಮಾಡಿಕೊಂಡು, ಅದನ್ನು ದಿನಾಲು ಓದಹತ್ತಿ
ದನು. ಕೆಲವು ದಿವಸಗಳಮೇಲೆ ಆ ಬ್ರಾಹ್ಮಣನು ಕಾ
ಶಿಯಾತ್ರೆಗೆ ಹೋಗುವ ಪ್ರಸಂಗ ಬರಲು, ಅವನು

ಅದನ್ನು ತನ್ನ ಸಂಗಡ ತೆಗೆದುಕೊಂಡು ಹೋದನು. ಅವನು ಭಾಗೀರಥಿಯಲ್ಲಿ ಸ್ನಾನಮಾಡಿ, ಅದರ ದಂಡೆಯಮೇಲೆ ಕುಳಿತು, ಅದನ್ನು ಓದಲಾರಂಭಿಸಿದನು. ಅಲ್ಲಿದ್ದ ಬ್ರಾಹ್ಮಣರು ಅದರ ಭಾಷಾಸರಣಿಯನ್ನೂ ಅರ್ಥಗಾಂಭೀರ್ಯವನ್ನೂ ವಾಕ್ಯಗಳನ್ನು ಸಮರ್ಪಕವಾಗಿ ವಿವರಿಸಿರುವದನ್ನೂ ಕೇಳಿ ಬೆರಗಾಗಿ, ಆ ಕಾಲಕ್ಕೆ ಕಾಶಿಯಲ್ಲಿ ಮಹಾಪಂಡಿತನೆಂದು ಹೆಸರು ಪಡೆದ ಒಬ್ಬ ಸನ್ಯಾಸಿಗೆ ಈ ವೃತ್ತಾಂತವನ್ನು ತಿಳಿಸಿದರು. ಅವನು ಅದನ್ನು ತನ್ನ ಬಳಿಗೆ ತರಿಸಿಕೊಂಡು ಓದಿ, ಅದರಲ್ಲಿ ಕಂಡು ಬಂದ ಏಕನಾಥನ ಜಾಣತನಕ್ಕೆ ತಲೆದೂಗಿದನು. ಆದರೆ ಧರ್ಮದ ಗುಟ್ಟನ್ನು ಈ ಮೇರೆಗೆ ಬಯಲಿಗೆ ಹಾಕಿದ್ದು ಮಾತ್ರ ಆವನ ಮನಸಿಗೆ ಬಾರದ್ದರಿಂದ ಅವನು ತನ್ನ ಶಿಷ್ಯನಿಂದ ಅದನ್ನು ಭಾಗೀರಥಿಯಲ್ಲಿ ಒಗಿಸಿ "ನೀವು ಭಾಷಾಂತರಿಸಿದ ಭಾಗವತದ ಮರಾಠಿಯ ಗ್ರಂಥವನ್ನು ತೆಗೆದುಕೊಂಡು ದಯಮಾಡಿ ಕಾಶಿಗೆ ಬರಬೇಕು" ಎಂಬ ಅಭಿಪ್ರಾಯವುಳ್ಳ ಒಂದು ಪತ್ರವನ್ನು ಬರೆದು ತನ್ನ ಶಿಷ್ಯರ ಕೈಯಲ್ಲಿ ಕೊಟ್ಟು ಏಕನಾಥನ ಬಳಿಗೆ ಕಳಿಸಿದನು. ಅವರು ಪೈಠಣಕ್ಕೆ ಬಂದು ಏಕನಾಥನಿಗೆ ಆ ಪತ್ರವ ಕೊಟ್ಟರು. ಏಕನಾಥನು ಆ ಪತ್ರವನ್ನು ನೋಡಿ ಬಹಳ ಸಂತೋಷದಿಂದ ತಾನು ಭಾಷಾಂತರಿಸಿದ ೫ ಅಧ್ಯಾಯಗಳನ್ನು ತೆಗೆದು

A2255



ಕೊಂಡು ಆ ಶಿಷ್ಯರ ಕೂಡ ಕಾಶಿಗೆ ಹೋಗಿ, ಅವನ್ನು ಆ ಸನ್ಯಾಸಿಯ ಕೈಯಲ್ಲಿ ಕೊಟ್ಟನು. ಅವನು ಅವುಗಳನ್ನು ಓದಿ ಏಕನಾಥನ ಪಾಂಡಿತ್ಯಕ್ಕೆ ತಲೆದೂಗಿ ಅವನಿಗೆ ಹೇಳಿದ್ದು—ಮಿತ್ರಾ, ನಿನ್ನ ಜಾಣತನಕ್ಕೆ ಜೋಡಿಲ್ಲ, ಆದರೆ ಭಾಗವತದ ಭಾಷಾಂತರ ಮಾಡುವ ಕೆಲಸಕ್ಕೆ ಮಾತ್ರ ನೀನು ಕೈಹಾಕತಕ್ಕದ್ದಿದ್ದಿಲ್ಲ. ಯಾಕೆಂದರೆ ಇದರಿಂದ ಧರ್ಮಶಾಸ್ತ್ರಗಳನ್ನು ವಿವರಿಸಿ ಹೇಳುವ ಧರ್ಮೋಪದೇಶಕರ ಮಾನಕ್ಕೂ ಆಚಾರ್ಯರ ಮಾನಕ್ಕೂ ಕೊರತೆಯುಂಟಾಗುವದು. ಅದಕ್ಕೆ ಏಕನಾಥನು ನಮ್ರತೆಯಿಂದ ಹೇಳಿದ್ದು—ಸಾಧುಗಳೇ, ಸಂಸ್ಕೃತಭಾಷೆಯನ್ನರಿಯದ ಜನರ ಕೈಯಲ್ಲಿ ಈ ಪುಸ್ತಕವು ಹೋದರೆ ಅವರಿಗೆ ಬಹಳ ಪ್ರಯೋಜನವಾಗುವದೆಂದು ಆಲೋಚಿಸಿ, ನಾನು ಈ ಕೆಲಸವನ್ನು ಕೈಕೊಂಡಿದ್ದೇನೆ. ಭಾಗವತದ ಭಾಷಾಂತರವನ್ನು ಮಾಡಕೂಡದೆಂದು ಶಾಸ್ತ್ರಗಳಲ್ಲಿ ಎಲ್ಲಿಯೂ ಹೇಳಿರುವದಿಲ್ಲ. ಇದನ್ನು ಕೇಳಿ ಆ ಸನ್ಯಾಸಿಯು ನಿರುತ್ತರನಾದನು. ಬಳಿಕ ಕಾಶಿಯೊಳಗಿನ ಪಂಡಿತರು ಒಂದು ದೊಡ್ಡ ಸಭೆ ನೆರಿಸಿದರು. ಆದರಲ್ಲಿ ಏಕನಾಥನಿಗೂ ಆ ಸನ್ಯಾಸಿಗೂ ಎಷ್ಟೋ ಮಹತ್ವದ ವಿಷಯಗಳಲ್ಲಿ ವಾಗ್ವಾದಗಳು ನಡೆದವು. ಅದರಲ್ಲಿ ಏಕನಾಥನು ಜಯ ಪಡೆದನು. ಆಮೇಲೆ ಕಾಶಿಯೊಳಗಿನ ದೊಡ್ಡ ದೊಡ್ಡ

Digitized by ROJA MUTHIAH RESEARCH LIBRARY

ಪಂಡಿತರು "ಈ ಕಾಲದ ಪಂಡಿತರಲ್ಲಿ ಏಕನಾಥನೇ ಶ್ರೇಷ್ಠನು" ಎಂದು ಒಪ್ಪಿಕೊಂಡು, ಅವನಿಗೆ ತಕ್ಕ ಮಾನಮರ್ಯಾದೆಗಳನ್ನು ಮಾಡಿ, ಅವನನ್ನು ಕೆಲವು ದಿವಸ ಕಾಶಿಯಲ್ಲಿ ಇಟ್ಟುಕೊಂಡರು.

ಏಕನಾಥನು ಬಹು ಸಂತೋಷದಿಂದ ಕಾಶಿಯಲ್ಲಿ ಕೆಲಕಾಲ ಕಳೆದನು. ಈ ಹೊತ್ತಿಗೆ ಅವನು ರುಕ್ಮಿಣೀಸ್ವಯಂವರ, ಭಾಗವತ ಎಂಬೀ ಮೇಲಾದ ಎರಡು ಗ್ರಂಥಗಳನ್ನು ಬರೆದನು. ಈ ಭಾಗವತಕ್ಕೆ "ಏಕನಾಥೀ ಭಾಗವತ" ಎಂಬ ಹೆಸರು ಬಿದ್ದಿರುತ್ತದೆ. ಅವನು ಕಾಶಿಯಲ್ಲಿ ಸಹ ಕಥಾಕೀರ್ತನೆಗಳಿಂದ ಜನರಿಗೆ ಉಪದೇಶ ಮಾಡುವ ತನ್ನ ಕೆಲಸವನ್ನು ಎಡೆಬಿಡದೆ ನಡಿಸಿದ್ದನು.

ಅವನು ಕಾಶಿಯಿಂದ ಪೈಠಣಕ್ಕೆ ತಿರುಗಿ ಬಂದ ಮೇಲೆ ಎಷ್ಟೋ ಬೇರೆ ಪುಸ್ತಕಗಳನ್ನು ಬರೆದನು. ಅವುಗಳಲ್ಲಿ 'ಭಾವಾರ್ಥ ರಾಮಾಯಣವು' ಒಂದಾಗಿದೆ. ಅದು ಕವಿತಾಬದ್ಧವಾದ ಉತ್ತಮ ಗ್ರಂಥವಿರುತ್ತದೆ. ಅದನ್ನು ಅವನು ರಾಮರಾವಣರ ಯುದ್ಧದವರೆಗೆ ಬರೆದು ದೇಹವಿಟ್ಟನು. ಆಮೇಲೆ ಅವನ ಶಿಷ್ಯರಲ್ಲಿ ಒಬ್ಬನು ಆ ಗ್ರಂಥವನ್ನು ಮುಗಿಸಿದನು. ಇವುಗಳ ಹೊರತು ಆತ್ಮಸುಖ, ಹಸ್ತಮಾಲಕ, ಆನಂದಲಹರಿ ಎಂಬ ಪುಸ್ತಕಗಳನ್ನು ಬರೆದನು. ಆದರೆ ಈ ಗ್ರಂಥಗಳು ಯಾವಕಾಲಕ್ಕೆ ಅವನಿಂದ ಬರೆಯಲ್ಪಟ್ಟವೆಂ

Digitized by ROJA MUTHIAH RESEARCH LIBRARY



ಬುದು ಮಾತ್ರ ತಿಳಿಯುವದಿಲ್ಲ. ಅವನು ಜೀವಿಸಿರುವಾಗ ಇವು ಪ್ರಸಿದ್ಧಿಗೆ ಬರಲಿಲ್ಲ. ಆವನು ದೇಹವಿಟ್ಟ ಮೇಲೆ ಇವು ಲೋಕಪ್ರಿಯವಾದವು. ಜ್ಞಾನದೇವನೆಂಬ ಪ್ರಸಿದ್ಧ ಸಾಧುಪುರುಷನು ಭಗವದ್ಗೀತೆಯನ್ನು ಮಹಾರಾಷ್ಟ್ರಭಾಷೆಯಲ್ಲಿ ಭಾಷಾಂತರಿಸಿರುತ್ತಾನೆ. ಅದಕ್ಕೆ "ಜ್ಞಾನೇಶ್ವರೀ" ಎಂಬ ಹೆಸರು ಬಿದ್ದಿರುತ್ತದೆ. ಅದು ಮೇಲಾದ ಗ್ರಂಥವು. ಆದರೆ ಭಾಷೆಯು ಗಡಚಾಗಿರುವದರಿಂದ ಅದು ಎಲ್ಲರಿಗೂ ತಿಳಿಯಬೇಕೆಂಬುದ್ದೇಶದಿಂದ ಅದರೊಳಗಿನ ಕಠಿಣ ವಾಕ್ಯಗಳಿಗೆ ಟೀಕೆಗಳನ್ನು ಬರೆದನು. ಆಮೇಲೆ ಜನರು ಅದನ್ನು ಪ್ರೀತಿಯಿಂದ ಓದಹತ್ತಿದರು.

ಏಕನಾಥನು ತನ್ನ ಇಡಿ ಆಯುಷ್ಯವನ್ನು ಜನರಿಗೆ ಒಳಿತು ಮಾಡುವದರಲ್ಲಿಯೇ ಕಳೆದನು. ಸನ್ ೧೫೯೯ನೆಯ ಇಸವಿಯಲ್ಲಿ ಅವನಿಗೆ ಅಸ್ವಸ್ಥತೆಯುಂಟಾಗಲು ತನ್ನ ಅಂತ್ಯಕಾಲವು ಸಮೀಪಿಸಿತೆಂದು ತಿಳುಕೊಂಡು, ಶಿಷ್ಯರನ್ನು ಕರೆದು ಅವರಿಗೆ "ನಾನು ನಿಮ್ಮನ್ನು ಬೇಗನೆ ಬಿಟ್ಟು ಹೋಗತಕ್ಕವನಿದ್ದೇನೆ; ಆದದ್ದರಿಂದ ಕಡೆಯ ಕೀರ್ತನೆಯನ್ನು ಗೋದಾವರಿಯ ದಂಡೆಯಮೇಲೆ ಮಾಡುವೆನು" ಎಂದು ಹೇಳಿದನು. ಇದನ್ನು ಕೇಳಿ ಅವನ ಶಿಷ್ಯರು ಕೂಡಲೆ ನದಿಯ ದಂಡೆಯಮೇಲೆ ಒಂದು ವಿಸ್ತೃತವಾದ ಮಂಟಪವನ್ನು ಸಿದ್ಧಮಾಡಿದರು. ಪುರ

ದಿವಸ ಏಕನಾಥನು ಅರುಣೋದಯಕ್ಕೆ ಎದ್ದು, ಸ್ನಾನಸಂಧ್ಯಾದಿಗಳನ್ನು ತೀರಿಸಿಕೊಂಡು, ದೇವರನ್ನು ಪೂಜಿಸಿ, ತನ್ನ ಶಿಷ್ಯಸಮೂಹದೊಡನೆ ಹರಿಯ ನಾಮೋಚ್ಚಾರವನ್ನು ಮಾಡುತ್ತ ಗೋದಾವರಿಯ ತೀರಕ್ಕೆ ಹೋದನು. ಅಲ್ಲಿ ಬೇರೆಬೇರೆ ಜಾತಿಯ ಬೇರೆಬೇರೆ ಸಾಂಪ್ರದಾಯದ ಜನರು ಅವನ ಕಡೆಯ ಕೀರ್ತನೆಯನ್ನು ಕೇಳುವದಕ್ಕೂ ಅವನ ಅಂತ್ಯದ ದರ್ಶನವನ್ನು ತೆಗೆದುಕೊಳ್ಳುವದಕ್ಕೂ ನೆರೆದಿದ್ದರು. ಈ ಜನ ಸಮೂಹವನ್ನು ನೋಡಿ ಅವನು ಬಹು ಸಂತೋಷದಿಂದ ಕೀರ್ತನೆಯನ್ನು ಮಾಡಿದನು. ಕೀರ್ತನೆಯು ಮುಗಿದಮೇಲೆ ಏಕನಾಥನು ಎಲ್ಲರ ಅಪ್ಪಣೆಯನ್ನು ತೆಗೆದುಕೊಂಡು, ಶಾಂತಚಿತ್ತದಿಂದ ನದಿಯಲ್ಲಿ ಇಳಿದು, ಕೆಲವು ಸಾರೆ "ಜನಾರ್ದನನಿಗೆ ಜಯವಾಗಲಿ, ಜನಾರ್ದನನಿಗೆ ಜಯವಾಗಲಿ" ಎಂದು ನುಡಿದು ಜಲವನ್ನು ಪ್ರವೇಶಿಸಿ, ಪರಮಾತ್ಮನಲ್ಲಿ ಐಕ್ಯವಾದನು. ತುಸುಹೊತ್ತಿನಮೇಲೆ ಅವನ ಶಿಷ್ಯರು ಅವನ ದೇಹವನ್ನು ನೀರೊಳಗಿಂದ ತೆಗೆದು, ಅದಕ್ಕೆ ಅಗ್ನಿಸಂಸ್ಕಾರ ಮಾಡಿದರು. ಮತ್ತು ಆ ಸ್ಥಳದಲ್ಲಿ ಒಂದು ಗದ್ದುಗೆಯನ್ನು ಕಟ್ಟಿ ಅದರಮೇಲೆ ಅವನ ಪಾದುಕೆಗಳನ್ನಿಟ್ಟು ಪೂಜಿಸಹತ್ತಿದರು. ಈ ಮಹಾತ್ಮನ ನೆನಪಿಗಾಗಿ ಆ ಸ್ಥಳದಲ್ಲಿ ಆಷಾಢ ಶುದ್ಧ ೧೦ ದಿವಸ ವ

Digitized by ROJA MUTHIAH RESEARCH LIBRARY



ರ್ಷಕ್ಕೊಮ್ಮೆ ದೊಡ್ಡ ಜಾತ್ರೆಯು ನೆರೆಯುತ್ತಲಿದೆ.

ಏಕನಾಥನ ಚರಿತ್ರೆಯು ನೀತಿಯಿಂದ ತುಂಬಿಕೊಂಡಿರುತ್ತದೆಂದು ವಾಚಕರಿಗೆ ಮನವರಿಕೆಯಾಗಿರಬಹುದು. "ಮೂರುವರ್ಷದಬುದ್ಧಿಯು ನೂರುವರ್ಷದತನಕ" ಎಂಬ ಗಾದೆಯಮಾತು ಏಕನಾಥನ ಚರಿತ್ರೆಯಿಂದ ಸಿದ್ಧವಾಗುತ್ತದೆ. ತೀರ ಚಿಕ್ಕವನಿರುವಾಗಲೇ ದೇವರು ಅವನ ಭಾವಕ್ಕೆ ಮೆಚ್ಚಿ, ಅವನು ಯಾವ ಮಾರ್ಗದಿಂದ ನಡೆಯಬೇಕೆಂಬದನ್ನು ಸೂಚಿಸಿದನು. ಆ ಮಾರ್ಗವು ಗಂಡಾಂತರವುಳ್ಳದ್ದಿದ್ದರೂ, ಅದರಲ್ಲಿ ಬಗೆಬಗೆಯ ಎಡರುಗಳು ಬಂದರೂ ಏಕನಾಥನು ಅವುಗಳನ್ನು ಲೆಕ್ಕಿಸದೆ ದೃಢಮನಸಿನಿಂದ ಅದೇಮಾರ್ಗದಿಂದ ನಡೆಯಲು ದೇವರು ಅವನಿಗೆ ಪ್ರಸನ್ನನಾದನು. ತ್ರೇತಾಯುಗದಲ್ಲಿ ಬಾಲಕನಾದ ಧ್ರುವನು ತನ್ನ ಭಕ್ತಿಯಿಂದ ಪರಮಾತ್ಮನನ್ನು ಒಲಿಸಿಕೊಂಡು ಧ್ರುವಪದವಿಯನ್ನು ಪಡೆದಂತೆ, ಕಲಿಯುಗದಲ್ಲಿ ಏಕನಾಥನು ದೃಢಮನಸಿನಿಂದ ನಡೆದು ಪರಮಾತ್ಮನ ಅನುಗ್ರಹ ಪಡೆದು ಮುಕ್ತಿಹೊಂದಿದನು. ನಾವು ಎಷ್ಟು ಪ್ರಾರ್ಥನೆ ಮಾಡಿದರೂ ದೇವರು ನಮಗೆ ಪ್ರಸನ್ನನಾಗುವದಿಲ್ಲೆಂದು ಭಕ್ತರು ಆಗಾಗ್ಗೆ ಗುಣುಗುಟ್ಟುವರು; ಆದರೆ ದೇವರನ್ನು ಒಲಿಸಿಕೊಳ್ಳುವದು ಸುಲಭವಾದದ್ದಲ್ಲೆಂಬದನ್ನು ಅವರು ಲಕ್ಷ್ಯಕ್ಕೆ ತರುವದಿಲ್ಲ.

ದೇವರ ಸಲುವಾಗಿ ಸುಖಗಳನ್ನೂ ಐಶ್ವರ್ಯವನ್ನೂ ಹುಲ್ಲಿಗಿಂತ ಕಡೆಯೆಂದೆಣಿಸಬೇಕಾಗುತ್ತದಿಷ್ಟೇ ಅಲ್ಲ ಆದರೆ ಧ್ರುವನಂತೆ ಇಲ್ಲವೆ ಏಕನಾಥನಂತೆ ನಿಷ್ಠೆಯಿಂದ ನಡೆಯಬೇಕಾಗುತ್ತದೆ. ತನುಮನಗಳನ್ನು ಅವನಿಗೆ ಅರ್ಪಿಸಿ ನಿಶ್ಚಲವಾದ ಭಕ್ತಿಯಿಂದ ಅವನನ್ನು ಹುಡುಕಬೇಕಾಗುತ್ತದೆ. ಅಂದರೆ ಮಾತ್ರ ಅವನು ದೊರಕುವನು.

ಏಕನಾಥನು ಗುರುಸೇವೆಯಲ್ಲಿ ತೋರಿಸಿದ ಮೇಲಾದ ನಿಷ್ಠೆಯು ಸಹ ಅನುಕರಣೀಯವಾಗಿದೆ. ಅವನು ಹಗಲಿರುಳು ಗುರುಸೇವೆಯನ್ನು ತತ್ಪರತೆಯಿಂದ ಮಾಡಿದನು. ಜನಾರ್ದನಪಂತರನ್ನು ತನ್ನ ತಂದೆಯಂತೆ ಭಾವಿಸಿದನು. ಅವರಾದರೂ ಇಂಥ ಶಿಷ್ಯನು ದೊರಕುವದು ದುರ್ಲಭವೆಂದೆಣಿಸಿ, ಹೊಟ್ಟೆಯ ಮಗನಿಗಿಂತ ಹೆಚ್ಚು ಅವನನ್ನು ಪ್ರೀತಿಸಿ, ಅವನಿಗೆ ಮನಮುಟ್ಟಿ ವಿದ್ಯಾದಾನ ಮಾಡಿದರು ಇಷ್ಟೇ ಅಲ್ಲ ಅವನನ್ನು ಸದ್ಗುಣಿಯನ್ನೂ ನೀತಿವಂತನನ್ನೂ ವ್ಯವಹಾರಜ್ಞನನ್ನೂ ಬ್ರಹ್ಮಜ್ಞನನ್ನೂ ಮಾಡಿದರು. ಈ ಶಿಕ್ಷಣದ ಪರಿಣಾಮವೇನಾಯಿತೆಂದರೆ, ಏಕನಾಥನು ಹಿಂದುಸ್ಥಾನದ ಸಾಧುಗಳಲ್ಲಿ ಮೇಲಾದವನೆಂದೆನಿಸಿಕೊಂಡನು.

ಈ ಗುರುಶಿಷ್ಯರೊಳಗೆ ಕಂಡುಬಂದ ಸೇವ್ಯಸೇವಕಭಾವವೂ ಪ್ರೀತಿಯೂ ಈಗಿನ ಗುರುಶಿಷ್ಯ

Digitized by ROJA MUTHIAH RESEARCH LIBRARY



ರಲ್ಲಿ ಕಾಣುವದು ಅಪರೂಪ. ಏಕನಾಥನು ತೋರಿಸಿದ ಗುರುಭಕ್ತಿಯನ್ನೂ ನೀತಿಯನ್ನೂ ಈಗಿನ ವಿದ್ಯಾರ್ಥಿಗಳು ತೋರಿಸುವದು ಕಠಿಣ. ಈ ಮೇಲಾದ ಗುಣಗಳು ಅವರಲ್ಲಿ ಹುಟ್ಟಬೇಕಾದರೆ, ಉಪದೇಶಕ್ಕಿಂತ ಮಾದರಿಯು ಹೆಚ್ಚು ಉಪಯೋಗಕ್ಕೆ ಬೀಳುತ್ತದೆ. "ಹಿರಿಯಕ್ಕನ ಚಾಳಿ ಮನೆಯವರಿಗೆಲ್ಲ" ಅಂದರೆ ಗುರುಹಿರಿಯರು ಒಳ್ಳೇಮಾರ್ಗದಿಂದ ನಡೆದುತೋರಿಸಿದರೆ, ಕಿರಿಯರು ಸಹಜವಾಗಿಯೇ ಅದೇಮಾರ್ಗದಿಂದ ನಡೆಯಹತ್ತುವರು. ಆದದ್ದರಿಂದ ಮಕ್ಕಳು ನೀತಿವಂತರಾಗಬೇಕಾದರೆ, ಮತ್ತು ಶಿಷ್ಯರು ಸನ್ಮಾರ್ಗದಿಂದ ನಡೆಯಬೇಕಾದರೆ, ಅವರ ತಾಯಿತಂದೆಗಳೂ ಗುರುಗಳೂ ಸ್ವತಃ ನೀತಿವಂತರಾಗಿರುವದು ಅವಶ್ಯವು ನುಡಿಯಂತೆ ನಡೆಯುಳ್ಳ ತಾಯಿತಂದೆಗಳ ಮತ್ತು ಗುರುಗಳ ಅಧಿಕಾರವು ಮಕ್ಕಳಮೇಲೆಯೂ, ಶಿಷ್ಯರಮೇಲೆಯೂ ನಿರಾತಂಕವಾಗಿ ನಡೆಯುವದು. ಆದುದರಿಂದ ಗುರುಹಿರಿಯರ ಬರಿಯ ಉಪದೇಶಕ್ಕಿಂತಲು ಅವರ ಸದ್ವರ್ತನಗಳು ಚಿಕ್ಕವರನ್ನು ನೀತಿಮಾರ್ಗಕ್ಕೆ ಹಚ್ಚಲಿಕ್ಕೆ ಹೆಚ್ಚು ಪ್ರಯೋಜನಕರವಾಗಿರುತ್ತವೆ.

ಮೋಕ್ಷವನ್ನು ಪಡೆಯಬೇಕಾದರೆ ಸಂಸಾರವನ್ನು ತ್ಯಜಿಸಲಿಕ್ಕೆಬೇಕೆಂಬ ಅಭಿಪ್ರಾಯವು ಸರ್ವಸಮ್ಮತವಾದದ್ದಲ್ಲೆಂದು ಏಕನಾಥನ ಚರಿತ್ರೆಯು ತಿ

ಳಿಸುತ್ತದೆ. ಪ್ರಪಂಚದಲ್ಲಿದ್ದರೆ ಮನುಷ್ಯನು ನಿಶ್ಚಲವಾದ ಮನಸಿನಿಂದ ದೇವರ ಧ್ಯಾನವನ್ನು ಮಾಡಲಾರನೆಂದು ಹಲವರು ವಾದಿಸುವರು. ಇವರಿಗೆ ಏಕನಾಥನ ಚರಿತ್ರೆಯೇ ಸಮರ್ಪಕವಾದ ಉತ್ತರವೆಂದು ನಾವು ಎಣಿಸುತ್ತೇವೆ. ಸಂಸಾರದ ಎಡರುಗಳಿಗೆ ಹೆದರಿ ಅಡವಿ ಸೇರುವವರು ತಮ್ಮ ಮನಸಿನ ಅಶಕ್ತತೆಯನ್ನು ಹೊರಗೆಡಹುತ್ತಾರೆ. ಅಂಜುಬುರುಕನಾದ ಸಿಪಾಯಿಯಂತೆ ರಣಭೂಮಿಯನ್ನು ಬಿಟ್ಟು ಹೋಗದೆ, ಪ್ರಪಂಚದಲ್ಲಿ ಆಗಾಗ್ಗೆ ಬರುವ ಕಷ್ಟಗಳನ್ನು ಶಾಂತತೆಯಿಂದಲೂ ತಾಳ್ಮೆಯಿಂದಲೂ ದೃಢಮನಸಿನಿಂದಲೂ ತಡಕೊಂಡು, ಕೈಲಾದಮಟ್ಟಿಗೆ ಪರೋಪಕಾರದಲ್ಲಿ ನಿರತನಾಗಿದ್ದು, ತನ್ನ ಮೇಲಾದ ಆಚರಣೆಯಿಂದಲೂ ಸದುಪದೇಶಗಳಿಂದಲೂ ದುರ್ಮಾರ್ಗಿಗಳನ್ನು ಸನ್ಮಾರ್ಗಕ್ಕೆ ಹಚ್ಚಿ, ಮುಕ್ತಿಪಡೆಯುವದೇ ಮನುಷ್ಯನ ಕರ್ತವ್ಯವಾಗಿರುತ್ತದೆ.

ವೈದಿಕಮತದ ಪ್ರಾಬಲ್ಯವು ವಿಶೇಷವಿದ್ದ ಕಾಲಕ್ಕೆ ಏಕನಾಥನು, ಧೈರ್ಯದಿಂದ ಜನರೂಢಿಯ ವಿರುದ್ಧವಾಗಿ ವರ್ತಿಸಿದ್ದು ಆಶ್ಚರ್ಯಪಡತಕ್ಕ ಸಂಗತಿಯಾಗಿದೆ. ಪೈಠಣದೊಳಗಿನ ಬ್ರಾಹ್ಮಣರು ಶೂದ್ರರನ್ನು ತಿರಸ್ಕರಿಸುತ್ತಿದ್ದರಿಷ್ಟೇ ಅಲ್ಲ, ಅವರ ನೆರಳು ತಮ್ಮ ಮೇಲೆ ಬಿದ್ದರೆ ಸ್ನಾನಮಾಡುತ್ತಿದ್ದರು. ಇಂಥ ಹೊತ್ತಿನಲ್ಲಿ ಏಕನಾಥನು, ಇವನು ಬ್ರಾಹ್ಮಣನು, ಅವನು ಶೂದ್ರನು, ಎಂಬ ಭೇದವನ್ನೆಣಿಸದೆ ಎಲ್ಲರಿಗೂ ಸರಿಯಾಗಿ ಮಾನಕೊಟ್ಟನು. ಇದಲ್ಲದೆ ಸುಶೀಲನಾದ ಶೂದ್ರನನ್ನು ದುರ್ಗುಣಿಯಾದ ಬ್ರಾಹ್ಮಣನಿಗಿಂತ ಹೆಚ್ಚು ಮನ್ನಿಸಿದನು. ನೀತಿವಂತನಾದ ಶೂದ್ರನ ಮನೆಯಲ್ಲಿ ಬ್ರಾಹ್ಮಣರು ಅನ್ನೋದಕಗಳನ್ನು ತೆಗೆದುಕೊಳ್ಳಲಿಕ್ಕೆ ಅಡ್ಡಿ ಇಲ್ಲವೆಂದು ಹಿಂದೂಶಾಸ್ತ್ರಗಳು ಸಾರಿಹೇಳುತ್ತವೆ. ಆದರೆ ಸದ್ಯಕ್ಕೆ ಜನರೂಢಿಯೇ ಪ್ರಬಲವಾಗಿದೆ. ವೃದ್ಧಾಚಾರಗಳೇ ಶಾಸ್ತ್ರಗಳ ಅಂಗವಾಗಿವೆ. ಶೂದ್ರರ ಮನೆಯಲ್ಲಿ ಊಟಮಾಡುವದು ಹಾಗಿರಲಿ, ಒಂದು ವರ್ಗದ ಬ್ರಾಹ್ಮಣರು ಮತ್ತೊಂದು ವರ್ಗದ ಬ್ರಾಹ್ಮಣರಲ್ಲಿ ಸಹ ಊಟಮಾಡುವದಿಲ್ಲ. ಈ ಪ್ರಕಾರದ ಒಡಕು ನಿಶ್ಚಯವಾಗಿ ದೇಶಕ್ಕೆ ಹಾನಿಕಾರಕವಾದದ್ದಾಗಿದೆ. ಆದದ್ದರಿಂದ ದೇಶದ ಹಿತವನ್ನು ಬಯಸುವಂಥ ಪ್ರತಿಯೊಬ್ಬನು ಈ ಭಿನ್ನಭಾವವನ್ನು ಬೇರುದರಸಿ ಕಿತ್ತುಹಾಕುವ ಪ್ರಯತ್ನ ಮಾಡತಕ್ಕದ್ದು. ಏಕನಾಥನಂತೆ ಧೈರ್ಯದಿಂದ ವರ್ತಿಸತಕ್ಕದ್ದು. ಏಕನಾಥನು ಜನರ ನಿಂದೆಗೆ ಹೆದರದೆ ದೃಢನಿಶ್ಚಯದಿಂದಲೂ ಮನೋಸಾಕ್ಷಿಗೆ ಸರಿಯಾಗಿಯೂ ಧರ್ಮಶಾಸ್ತ್ರದ ತತ್ವಗಳಿಗನುಗುಣವಾಗಿಯೂ ಸನ್ಮಾರ್ಗಿಯಾದ ಶೂದ್ರನ ಔತನವನ್ನು ಹಿಡಿದನು. ಇದರಿಂದ ಅವನು ನಿಂದೆಗೊಳಗಾಗದೆ ಮಹಾಸಾಧುವೆಂದು ಮನ್ನಿಸಲ್ಪಟ್ಟನು.



Digitized by ROJA MUTHIAH RESEARCH LIBRARY

ಈ ಚರಿತ್ರೆಯನ್ನು ಓದುವವರು ಏಕನಾಥನಂತೆ ಸದ್ಗುಣಿಗಳಾಗಿಯೂ ಪರೋಪಕಾರದಲ್ಲಿ ದೃಢ ಮನಸ್ಸುಳ್ಳವರಾಗಿಯೂ ದೇವರಲ್ಲಿ ನಂಬಿಗೆಯುಳ್ಳವರಾಗಿಯೂ ನಡೆದು, ಸುಗತಿಯನ್ನು ಪಡೆಯುವಂತೆ ವಿಶ್ವಪಾಲಕನೂ ಜಗತ್ಪಾಲಕನೂ ಆದ ದೇವರು ಅವರಿಗೆ ಸುಜ್ಞಾನವನ್ನೀಯಲೆಂತಲೂ ಈ ಮೇಲಾದ ಕರ್ತವ್ಯವನ್ನು ಕೊನೆಗಾಣಿಸುವಂತೆ ಅವರಿಗೆ ಧೈರ್ಯವನ್ನೂ ಬಲವನ್ನೂ ಉತ್ಸಾಹವನ್ನೂ ಆಯುರಾರೋಗ್ಯವನ್ನೂ ದಯಪಾಲಿಸಲೆಂತಲೂ ಆ ಮಹಾಮಹಿಮನನ್ನು ಶರಗೊಡ್ಡಿ ಬೇಡಿಕೊಂಡು ಈ ಸಾಧುಪುರುಷನ ಚರಿತ್ರೆಯನ್ನು ಮುಗಿಸುತ್ತೇವೆ.

ಸಮಾಪ್ತ

ದಿನಾಂಕ ಸೂಚಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಸರಸ್ವತಿ ಭಂಡಾರ

: ೧೫ ದಿನಗಳಿಗಿಂತ ಹೆಚ್ಚುಕಾಲ ಯಾರು ಪುಸ್ತಕವನ್ನಿಟ್ಟುಕೊಳ್ಳಲಾಗದು.

| ಹಿಂದಿರುಗಿಸುವ ದಿನ | ಹಿಂದಿರುಗಿಸುವ ದಿನ |
| --- | --- |
| | |

ಲೇಖಕ: ಹಲಸಗಿ (ಗುರುಬಸಪ್ಪ
ಳ ಚರಿತ್ರೆ

ಪುಸ್ತಕಸೂಚಿ

ವ. ಸಂ: △, 2ಚ AKA M94

ಕ್ರ. ಸಂ: 2255.

( ಗುರುಬಸಪ್ಪ

ವ. ಸಂ: △. 2ಚ AKA M94

ಕ್ರ. ಸಂ: 2255.

ಕ. ಸಾ. ಪ.
ಗ್ರಂಥ ಭಂಡಾರ

Digitized by ROJA MUTTIAH RESEARCH LIBRARY

Digitized by ROJA MUTHIAH RESEARCH LIBRARY